ತಡೆಹಿಡಿಯಲಾದ ಪಟ್ಟಿ) 8ನೇ ಪಟ್ಟಿಯಲ್ಲಿನ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 11 ಪ್ರಶ್ನೆಗಳಿಗೆ ಉತ್ತರಗಳನ್ನು, ತಡೆಹಿಡಿಯಲಾದ ಪ್ರಶ್ನೆಯ ಒಂದು ಉತ್ತರವನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 29 ಪ್ರಶ್ನೆಗಳ ಪೈಕಿ 26 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು.

(ಈ ಹಂತದಲ್ಲಿ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

6. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ: ರಾಜ್ಯದಲ್ಲಿ ಹರಡುತ್ತಿರುವ 'ಚಿಕುನ್ ಗುನ್ಯ' ಕಾಯಿಲೆಯ ಬಗ್ಗೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) : ಮಾನ್ಯ ಉಪಾಧ್ಯಕ್ಷರೆ, ಈ ವಿಷಯದ ಬಗ್ಗೆ ನಾನು ಈಗಾಗಲೇ ತಮಗೆ ಬರೆದು ಕಳುಹಿಸಿದ್ದೇನೆ ಮತ್ತು ಇದು ಈ ಹಿಂದೆಯೂ ಸದನದಲ್ಲಿ ಪ್ರಸ್ತಾಪವಾಗಿತ್ತು. ಆದರೂ ಪುನಃ ಇದನ್ನು ಪ್ರಸ್ತಾಪ ಮಾಡತಕ್ಕಂಥ ಪ್ರಮೇಯ ಏಕೆ ಬಂದಿದೆ ಎಂದರೆ, ನಾವು ಎಷ್ಟು ಹೇಳಿದರೂ, ಈ 'ಚಿಕುನ್ ಗುನ್ಯ' ಎನ್ನತಕ್ಕಂಥ ಡಿಸೀಸ್ ಕಂಟ್ರೋಲ್ ಆಗುತ್ತಿಲ್ಲ. ಸುಮಾರು 40 ವರ್ಷಗಳ ನಂತರ ಈ ರೋಗ ಪುನಃ ರಿಪೀಟ್ ಆಗಿದೆ ಎನ್ನತಕ್ಕಂಥಾದ್ದು ಇವತ್ತು ಪತ್ರಿಕೆಗಳಲ್ಲಿ ಬಂದಿದೆ. ಇದು ಗುಲ್ಬರ್ಗ, ಬೀದರ್, ರಾಯಚೂರು, ತುಮಕೂರು, ಕೋಲಾರ, ಶಿವಮೊಗ್ಗ ಈ ಎಲ್ಲಾ ಭಾಗದಲ್ಲೂ ಹರಡಿದೆ ಎನ್ನುವುದು ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರ. ಪ್ರಪ್ರಥಮವಾಗಿ ಇದು 1973ರಲ್ಲಿ ಮಹಾರಾಷ್ಟ್ರದ ಕೆಲವು ಭಾಗಗಳಲ್ಲಿ ಇದು ಪ್ರಾರಂಭವಾಯಿತು. ಕಳೆದ ವರ್ಷ ಗುಲ್ಬರ್ಗ ಹಾಗೂ ಬೀದರ್ ಜಿಲ್ಲೆಗಳಲ್ಲಿ ಈ ರೋಗ ಕಾಣಿಸಿಕೊಂಡಿತ್ತು ಮತ್ತು ಆಗ ಇದು ಅತಿ ಬೇಗನೆ ನಿಯಂತ್ರಣಕ್ಕೆ ಬಂದಿತ್ತು. ಆದರೆ, ದುರ್ದೈವದಿಂದ ಈ ಬಾರಿಯ ಬೇಸಿಗೆಯಲ್ಲಿ ರಾಜ್ಯದ ಹಲವು ಭಾಗಗಳಲ್ಲಿ ಈ ವಿಚಿತ್ರವಾದಂಥ ಜ್ವರ ಕಾಣಿಸಿಕೊಂಡಂಥ ಈ ಕಾಯಿಲೆ. 'ಚಿಕುನ್ ಗುನ್ಯ' ಎನ್ನತಕ್ಕಂಥ ಹೆಸರಿನಲ್ಲಿ ಸ್ಪ್ರೆಡ್ ಆಗುತ್ತಿದೆ. ಇದನ್ನು ನಿಲ್ಲಿಸತಕ್ಕಂಥಾದಕ್ಕೆ ಸರ್ಕಾರ ಸ್ವಲ್ಪ ಮಟ್ಟಿಗೆ ಪ್ರಯತ್ನ ಮಾಡಿದರೂ ಕೂಡ ಔಷಧಿಗಳ ಕೊರತೆಯಿಂದ ಮತ್ತು ಇದು ಫಾಸ್ಟ್ ಆಗಿ ಸ್ಪ್ರೆಡ್ ಆಗುವುದರಿಂದ, ಇದನ್ನು ತಡೆಹಿಡಿಯತಕ್ಕಂಥಾದ್ದು ಆಗುತ್ತಿಲ್ಲ. ಡಾಕ್ಟರ್‌ಗಳ ಕೊರತೆ ಇದೆ, ಔಷಧಿಗಳ ಕೊರತೆ ಇದೆ. ಇದು ಹಳ್ಳಿಹಳ್ಳಿಗೆ ಸ್ಪ್ರೆಡ್ ಆಗುತ್ತಿದೆ. ಉದಾಹರಣೆಗೆ ಹೇಳಬೇಕಾದರೆ, ಗುಲ್ಬರ್ಗ ಒಂದೇ ಜಿಲ್ಲೆಯಲ್ಲಿ ಹೆಚ್ಚು ಕಡಿಮೆ, 470 ಹಳ್ಳಿಗಳಲ್ಲಿ ಇದು ಸ್ಪ್ರೆಡ್ ಆಗಿದೆ. 20 ಸಾವಿರಕ್ಕಿಂತಲೂ ಹೆಚ್ಚಿನ ಜನ ಈ ರೋಗಕ್ಕೆ ಒಳಗಾಗಿದ್ದಾರೆ. ಅದೇ ರೀತಿಯಾಗಿ, ನಮ್ಮ ತಾಲ್ಲೂಕಾದ ಯಾದಗೀರ್ ಒಂದರಲ್ಲೇ 13,586 ರೋಗಿಗಳು ಈಗಾಗಲೇ ದಾಖಲಾಗಿದ್ದಾರೆ. ಬೀದರ್ ಜಿಲ್ಲೆಯಲ್ಲಿ ಇದು ಸುಮಾರು 146 ಗ್ರಾಮಗಳಲ್ಲಿ ಸ್ಪ್ರೆಡ್ ಆಗಿದೆ. ಸುಮಾರು 7,183 ಜನ ಈ ರೋಗಕ್ಕೆ ಒಳಗಾಗಿದ್ದಾರೆ. ಹೀಗೆ, ಅನೇಕ ರೀತಿಯಿಂದ ಈ ರೋಗ ಎಲ್ಲಾ ಕಡೆ ಹರಡುತ್ತಿದೆ. ವಿಶೇಷವಾಗಿ, ಬೆಂಗಳೂರು ನಗರದ ಕೆಲವು ಭಾಗಗಳಲ್ಲೂ

ಕೂಡ ಇದು ಬಂದಿದ್ದು, ಸುಮಾರು 150ಕ್ಕೂ ಹೆಚ್ಚು ಜನರಿಗೆ ಇದರಿಂದ ಅಫೆಕ್ಟ್ ಆಗಿದೆ ಎನ್ನುವ ಮಾಹಿತಿ ನನಗೆ ಸಿಕ್ಕಿದೆ. ಇದರ ಜೊತೆಗೆ, ರಾಯಚೂರು, ಲಿಂಗಸೂರು, ಮಾನ್ವಿ ಈ ಭಾಗಗಳಲ್ಲೂ ಕೂಡ ಸಾಂಕ್ರಾಮಿಕ ಜ್ವರದ ಈ ರೋಗ, ಈ ಹೆಸರಿನಲ್ಲಿ ಎಲ್ಲಾ ಕಡೆ ಹರಡುತ್ತಾ ಇರತಕ್ಕಂಥಾದ್ದನ್ನು ನೋಡಿದರೆ, ಇದಕ್ಕೆ ಪ್ರಮುಖ ಮತ್ತು ಮೂಲ ಕಾರಣ ಸೊಳ್ಳೆಗಳ ಬೆಳವಣಿಗೆ ಎನ್ನುವುದು ಗೊತ್ತಾಗಿದೆ. ಇದನ್ನು ಕಂಟ್ರೋಲ್ ಮಾಡಲು ಫಾಗ್ ಮೆಷಿನ್ಸ್ ಯೂಸ್ ಮಾಡಬೇಕು ಎನ್ನುವ ಬೇಡಿಕೆ ಎಲ್ಲ ಕಡೆಗಳಲ್ಲಿ ಇದೆ. ಕೆಲವು ಕಡೆ ಡಿಸ್ಟ್ರಿಕ್ಟ್ ಹೆಲ್ತ್ ಆಫೀಸರ್ಸ್ ಇದನ್ನು ಪ್ರೊವೈಡ್ ಮಾಡಿದರೂ ಕೂಡ ಅನೇಕ ಕಡೆ ಈ ಫಾಗ್ ಮೆಷಿನ್ಸ್ ಕಳುಹಿಸಲು ಆಗುವುದಿಲ್ಲ. ಏಕೆಂದರೆ, ಎಲ್ಲಾ ಜಿಲ್ಲೆಗಳಲ್ಲಿ ಈ ರೋಗ ಪ್ರಾರಂಭವಾಗಿದೆ. ಹಾಗಾಗಿ, ಎಷ್ಟನ್ನು, ಎಲ್ಲಿಂದ ತರಬೇಕು ಎನ್ನುವ ಪ್ರಶ್ನೆಯೂ ಬರುತ್ತದೆ. ಆದರೆ, ಎಲ್ಲಾ ಕೆಲಸಗಳನ್ನು ನಿಲ್ಲಿಸಿ, ವಾರ್ ಫುಟಿಂಗ್ ರೀತಿಯಲ್ಲಿ ಇದಕ್ಕೆ ಸರ್ಕಾರ ಅಥವಾ ಆರೋಗ್ಯ ಇಲಾಖೆ ಆದ್ಯತೆ ಕೊಡದೇ ಹೋದರೆ, ಈಗಾಗಲೇ ಇದು 10–15 ಜಿಲ್ಲೆಗಳಲ್ಲಿ ಸ್ಪೆಡ್ ಆಗಿದ್ದು, ಖಂಡಿತವಾಗಿ ಇದು ರಾಜ್ಯದ ತುಂಬ 27 ಜಿಲ್ಲೆಗಳಿಗೂ ಸ್ಪೆಡ್ ಆಗಬಹುದು. ಇದರ ಲಕ್ಷಣಗಳಿಗೂ ಕೂಡ ಗೊತ್ತಿದೆ. ಅದೇನೆಂದರೆ, ಈ ಕಾಯಿಲೆಗೆ ಒಳಗಾದವರು ಸುಮಾರು 8–9 ದಿವಸಗಳಲ್ಲಿ ಸುಸ್ತು ಆಗಿಬಿಡುತ್ತಾರೆ. ಅವರಿಗೆ ನಡೆಯಲೂ ಆಗುವುದಿಲ್ಲ. ಅಂಥ ಕಾಯಿಲೆ ಬಂದ ತಕ್ಷಣ ಅವರನ್ನು ಯಾರಾದರೂ ಎತ್ತಿಕೊಂಡು ಹೋಗಬೇಕು. ನಮ್ಮ ಕಡೆ ಬಾತ್ ರೂಮ್ಸ್, ಸಂಡಾಸ್ ಮನೆಗಳಲ್ಲಿ ಇರುವುದಿಲ್ಲ. ಎಲ್ಲರೂ ಅಡವಿಗಳಿಗೆ, ಅಲ್ಲಿಗೆ ಇಲ್ಲಿಗೆ ತಂಬಿಗೆ ತೆಗೆದುಕೊಂಡು ಹೋಗುತ್ತಾರೆ. ಅಲ್ಲಿಗೆ ಹೋದಾಗ ಅವರಿಗೆ ಈ ಕಾಯಿಲೆ ಬಂದರೆ ಅವರು ಅಲ್ಲೇ ಕುಳಿತಿರುತ್ತಾರೆ. 3–4 ಜನರು ಹೋಗಿ ಅವರನ್ನು ಎತ್ತಿಕೊಂಡು ಬರತಕ್ಕಂಥಾದ್ದು ಕೂಡ ಆಗಿದೆ. ಹೀಗಾಗಿ, ಇದನ್ನು ವಾರ್ ಫುಟಿಂಗ್ ಮೇಲೆ ನಿಯಂತ್ರಿಸದೇ ಹೋದರೆ ಖಂಡಿತವಾಗಿ ಇದರಿಂದ ದೊಡ್ಡ ಹಾನಿಯಾಗುತ್ತದೆ. ಮತ್ತು ಹ್ಯೂಮನ್ ರಿಸೋರ್ಸ್‌ಗೆ ದೊಡ್ಡ ಎಫೆಕ್ಟ್ ಆಗುತ್ತದೆ ಎನ್ನುವ ಮಾತನ್ನು ಹೇಳುವುದಕ್ಕೆ ನಾನು ಇಚ್ಛೆಪಡುತ್ತಿದ್ದೇನೆ. ನಾನು ಮೊನ್ನೆ ಯಾದಗಿರಿಗೆ ಹೋದಾಗಲೂ ಕೂಡ ಅಲ್ಲಿಗೆ ತಾವು ಬರುವವರಿದ್ದಿರಿ. ಬಹುಶಃ ನನಗೆ ಮಾನ್ಯ ಶರಣಬಸಪ್ಪ ದರ್ಶನಾಪುರರವರು ಹೇಳುತ್ತಿದ್ದರು ಮತ್ತು ಯಾದಗಿರಿ ಎಂ.ಎಲ್.ಎ. ಆದ ಡಾಕ್ಟರ್‌ರವರು ಕೂಡ ಹೇಳುತ್ತಿದ್ದರು. ತಾವು ಬರುತ್ತಾ ಇದ್ದಿರಿ, ಅವರು ಅಲ್ಲಿ ಹೋಗುತ್ತಿದ್ದಾರೆಂದು ಮಧ್ಯದಲ್ಲಿ, ಅಲ್ಲಿ ಜನ ನನಗೆ ಭೇಟಿ ಆದಾಗ ಅವರು ಹೇಳುತ್ತಿದ್ದರು, ಅನೇಕ ಕಡೆ ಔಷಧಿಗಳ ಕೊರತೆ ಇದೆ. ಡಾಕ್ಟರುಗಳ ಕೊರತೆ ಇದೆ. ಆ ಡಾಕ್ಟರುಗಳು ಹಳ್ಳಿಗಳಿಗೆ ಪಂಚಾಯತ್‌ಗಳಿಗೆ ಹೋಗಿ ಮುಟ್ಟುತ್ತಿಲ್ಲ. ನಾಲ್ಕು ಹಳ್ಳಿಗೆ ಹೋದರೆ, ಇನ್ನು ಕೆಲವು ಹಳ್ಳಿಗಳಿಗೆ ಎರಡು ದಿವಸ ಮೂರು ದಿವಸ ತಡವಾಗಿ ಮುಟ್ಟತಕ್ಕಂಥದ್ದು ಆಗುತ್ತಿದೆ. ಹೀಗಾಗಿ ಇವತ್ತು ಜನ ಬಹಳ ಬೇಸತ್ತಿದ್ದಾರೆ. ಬಹಳ ಬೇಸರದಿಂದ ಮಾತನಾಡತಕ್ಕಂಥದ್ದನ್ನು ನಾನು ಮೊದಲನೇ ಸಲ ನೋಡಿದ್ದೇನೆ. ಅನೇಕ ಸಾರಿ ಇಂಥ

ಕಾಯಿಲೆಗಳು ಬರುತ್ತವೆ. ಸಣ್ಣಪುಟ್ಟ ಹಳ್ಳಿಗಳಲ್ಲಿ, ತಾಲ್ಲೂಕು ಮಟ್ಟದಲ್ಲಿ ಇಂಥ ಜ್ವರಗಳು, ಕಾಯಿಲೆಗಳು ಬಂದಾಗ ಆದಷ್ಟು ನಿಯಂತ್ರಣ ಮಾಡತಕ್ಕಂಥದ್ದು local ನಲ್ಲಿ ಮಾಡುತ್ತಾರೆ. ಆದರೆ, ಈಗ ಡಾಕ್ಟರ್ ಕೊರತೆಯೋ, ದುಡ್ಡಿನ ಕೊರತೆಯೋ, ಈ nurses ಕೊರತೆಯೋ ಅಥವಾ vehicle ಕೊರತೆಯೋ, ಈ mobile vehicles ಕಡಿಮೆ ಇದೆಯೋ ಅಥವಾ ಇದರ ಪ್ರಮಾಣ ಹೆಚ್ಚಿಗಿದ್ದ ಕಾರಣ ಅದಕ್ಕೆ ತಕ್ಕಂತೆ supply ಮಾಡತಕ್ಕಂಥ ಶಕ್ತಿ ಅಥವಾ ನೋಡಿಕೊಳ್ಳತಕ್ಕಂಥ ಶಕ್ತಿ ನಮ್ಮ ಅಧಿಕಾರಿಗಳ ಹತ್ತಿರ ಇಲ್ಲ ಎನ್ನುವ ಭಾವನೆ ಮೂಡುತ್ತಿದೆ. ಆದ್ದರಿಂದ, ದಯವಿಟ್ಟು ಇದರ ಬಗ್ಗೆ ಗಮನಹರಿಸತಕ್ಕಂಥದ್ದು ಬಹಳ ಮುಖ್ಯ. ಕೇವಲ ನನ್ನ ಒಂದು ಮತ ಕ್ಷೇತ್ರದಲ್ಲಿಯೇ ಈ ಗುರುಮಿಠ್‌ಕಲ್ ಭಾಗ ಅಥವಾ ಯಾದಗಿರಿ ಭಾಗದಲ್ಲಿ ಮಾತ್ರ ಆಗಿದೆ ಎನ್ನತಕ್ಕಂಥದ್ದಲ್ಲ. ಇಡೀ ರಾಜ್ಯದಲ್ಲಿಯೇ ಇದು ಹರಡುತ್ತಿದೆ. ಅದಕ್ಕೆ ಯಾವ ರೀತಿಯಾಗಿ ನಾವು ನಿಲ್ಲಿಸಬೇಕು? ಯಾವ ರೀತಿಯಾಗಿ ಕ್ರಮ ಜರುಗಿಸಬೇಕು? ತಾವು ಎಷ್ಟು ಹಣ ಬಿಡುಗಡೆ ಮಾಡುತ್ತೀರಿ? ಏಕೆಂದರೆ ತಮ್ಮ ಹೇಳಿಕೆಯಲ್ಲಿ ನಾನು ನೋಡಿದೆ. ಗುಲ್ಬರ್ಗಾ ಜಿಲ್ಲೆಗೆ 25 ಲಕ್ಷ ರೂಪಾಯಿಗಳು, ಬೀದರ್ ಜಿಲ್ಲೆಗೆ 16 ಲಕ್ಷ ರೂಪಾಯಿಗಳೆಂದು ತಾವು ಬಿಡುಗಡೆ ಮಾಡಿದ್ದೀರಿ. ಆದರೆ, ಈ ಹಳ್ಳಿಗಳಲ್ಲಿ ಇದು spread ಆಗಿರುವುದನ್ನು ನೋಡಿದರೆ ಮತ್ತು ಕಾಯಿಲೆ ಬಿದ್ದಂಥ patients ಸಂಖ್ಯೆ ನೋಡಿದರೆ ಖಂಡಿತವಾಗಿ ಈ ಹಣ ಸಾಕಾಗುವುದಿಲ್ಲವೆಂದು ಇದರಿಂದಲೇ ಗೊತ್ತಾಗುತ್ತದೆ ಮತ್ತು ಈ ಪರೀಕ್ಷೆ ಮಾಡುವುದಕ್ಕೂ ಕೂಡ ಈಗಾಗಲೇ sample survey ಮಾಡಿದ್ದಾರೆ. ಕೇವಲ ಗುಲ್ಬರ್ಗಾ ವ್ಯಾಪ್ತಿ ಅಲ್ಲ, ಗುಲ್ಬರ್ಗಾ, ರಾಯಚೂರು, ಬೀದರ್, ತುಮಕೂರು ಇಲ್ಲಿಂದಲೂ ಕೆಲವು samples ಪೂನಾಕ್ಕೆ National Institute of Virology ಎನ್ನತಕ್ಕಂಥ institutionಗೆ ಕಳುಹಿಸಿದ್ದಾರೆ. ಅಲ್ಲಿಂದ ಕೂಡ ಇದು confirm ಆಗಿ ಬಂದಿದೆ. ಇದು ಚಿಕುನ್ ಗುನ್ಯಾ ಎನ್ನತಕ್ಕಂಥ ರೋಗ. ಈ ರೋಗವನ್ನು ತಡೆಹಿಡಿಯತಕ್ಕಂಥ ಕೆಲಸ ಆಗಬೇಕು. ಏಕೆಂದರೆ ಇದು 40 ವರ್ಷದ ಮೇಲೆ repeat ಆಗುತ್ತಿದೆ ಎನ್ನುವ ಮಾತು ಪತ್ರಿಕೆಯಲ್ಲಿ ಕೂಡ ಬಂದಿದೆ. ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. Karnataka, Andhra Pradesh and Maharashtra have been severely affected by the decease this time. In Karnataka 36,000 cases have been reported so far from nine districts, including Tumkur, Bidar, Gulbarga, Raichur, Bellary, Chitradurga, Davanagere, Kolar and Bijapur. Samples sent to the Poona National Institute of Virology from five districts of Bidar, Gulbarga, Raichur, Bellary and Tumkur, have been tested positive for Chicken Gunya. Results from the four remaining districts are awaited. Chicken Gunya is a viral infection, spread by the Dengue causing mosquito aids Egypti, a sudden on-set of fever and severe joint pain are the main

symptoms. ಇದರಿಂದ panick ಆಗಿ ಜನ ಇದು ಏನು ಕಾಯಿಲೆಯೋ ಎನ್ನತಕ್ಕಂಥ ಅವರಿಗೇ ತಿಳಿದಿಲ್ಲ. ಏಕೆಂದರೆ sudden ಆಗಿ ಹೊಸ ಡಾಕ್ಟರುಗಳಿಗೆ ಕೂಡ ಅನೇಕ ಕಡೆ ಇನ್ನೂ ಅರ್ಥವಾಗಿಲ್ಲ. ನಮ್ಮ ಕಡೆ ಎಲ್ಲ ಇದು ಇಲಿ ರೋಗ ಇಲಿ ರೋಗ ಎಂದು ಹೇಳಿ ಕೆಲವು ಕಡೆ ಪ್ರಸಿದ್ಧಿಗೆ ಬಂತು. ಕೆಲವು ಕಡೆ ಪ್ರಾರಂಭದಲ್ಲಿ ಮಲೇರಿಯಾ ಎಂದು ಹೇಳಿಕೊಂಡರು. ಆದ್ದರಿಂದ ಅದು ನಿಜವಾದಂಥ ಕಾಯಿಲೆ ಇದು ಚಿಕುನ್ ಗುನ್ಯಾ ಎನ್ನತಕ್ಕಂಥದ್ದು ಇದೆ ಎಂದು ಈಗಾಗಲೇ ಗೊತ್ತಾಗಿದೆ. ತಾವು ಕೆಲವು ಭಾಗದಲ್ಲಿ ಹೋದಿರಿ. ಹೋದರೂ ಕೂಡ ಇದು control ಆಗುತ್ತಿಲ್ಲ, spread ಆಗುತ್ತಿದೆ, ಅದನ್ನು ತಕ್ಷಣ controlಗೆ ತರುವುದಕ್ಕೆ war footing ಮೇಲೆ ಎಲ್ಲಾ ಕೆಲಸ ಬಿಟ್ಟು ಇದಕ್ಕಾಗಿಯೇ mobile vans ಅನ್ನು ಉಪಯೋಗ ಮಾಡಿ, ಎಲ್ಲಿ ಈ ರೋಗ ಇಲ್ಲ ಅಥವಾ ಎಲ್ಲಿ ಕೆಲಸ ಸ್ವಲ್ಪ ಕಡಿಮೆ ಇದೆ. ಅಲ್ಲಿಂದ ಎಲ್ಲಾ vehicles ಅನ್ನು draw ಮಾಡಿ, ಇಲ್ಲವೆಂದರೆ Deputy Commissioner ರವರಿಗೆ authority ಕೊಟ್ಟು private hospitalsನ vehicles ಅನ್ನು ಕೂಡ requisition ಮಾಡಿಕೊಳ್ಳಿ. ಏಕೆಂದರೆ, emergency ಇದ್ದಲ್ಲಿ ಅವರು requisition ಮಾಡಿಕೊಳ್ಳಬಹುದು. ಅದಕ್ಕಾಗಿ ಸಂಪೂರ್ಣವಾದಂಥ authority Deputy Commissioner ರವರಿಗೆ ಮತ್ತು D.H.O.ರವರಿಗೆ, C.E.O.ರವರಿಗೆ ಈ ಮೂರ್ನಾಲ್ಕು ಜನರನ್ನು ಸೇರಿಸಿ ಒಂದು committee ಅನ್ನು ನೀವು ಮಾಡಿ ಕೊಟ್ಟರೆ ಖಂಡಿತವಾಗಿಯೂ ಇದನ್ನು control ಮಾಡುವುದಕ್ಕೆ ಸಾಧ್ಯವಿದೆ. ನಮ್ಮ ಗುಲ್ಬರ್ಗಾದ C.E.O.ರವರಿಂದ ಕೂಡ ನಾನು ಮಾಹಿತಿಯನ್ನು ತೆಗೆದುಕೊಂಡಿದ್ದೇನೆ. ಅವರು 17,831 cases ಮಾರ್ಚ್‌ಗೆ report ಆಗಿದೆ ಎಂದು ತಿಳಿಸಿದರು. ಅಂದರೆ 36,000 cases ಎಂದು ಈ ಪತ್ರಿಕೆಯಲ್ಲೆಲ್ಲ ನಾನು ಓದಿದೆ. ಬರೀ ಗುಲ್ಬರ್ಗಾ ಒಂದರಲ್ಲಿಯೇ 17,800 cases ಇದೆ. ಅಂದರೆ ಇದರ ಪ್ರಮಾಣ ಇನ್ನೂ ಹೆಚ್ಚಿಗೆ ಇದೆ ಇಡೀ ರಾಜ್ಯದಲ್ಲಿ ಎನ್ನತಕ್ಕಂಥದ್ದು ಆಗುತ್ತದೆ. ಇದು ಹೆಚ್ಚಿಗೆ affect ಆಗಿದ್ದು ಯಾದಗಿರಿ ತಾಲ್ಲೂಕಿನಲ್ಲಿ ಜಾಸ್ತಿ. 50 percent, ಇವತ್ತು nearly 13000 ಕ್ಕಿಂತಲೂ ಹೆಚ್ಚಿನ ಜನ ಈ ಭಾಗದಲ್ಲಿ ಜಾಸ್ತಿ ಇದ್ದಾರೆ. ಅದಕ್ಕಾಗಿ ಇದಕ್ಕೆ pain relief and paracetamol tablets have been distributed free of costs at the affected villages, ಎಂದು ಹೇಳುತ್ತಾರೆ. ಆದರೆ ಅನೇಕ ಹಳ್ಳಿಗಳಲ್ಲಿ ಇದು ಮುಟ್ಟುತ್ತಿಲ್ಲ. ನಾನು ಸ್ವತಃ ಮೊನ್ನೆ ಹೋದಾಗ ಕೇಳಿಕೊಂಡಿದ್ದೇನೆ. ಅಲ್ಲಿ ಔಷಧಿಯ ಕೊರತೆ ಇದೆ. ತಾವು requisition ಮಾಡಿಕೊಂಡು ಇಲ್ಲಿ pharmaceutical ಅಥವಾ Director ಯಾರ್ಯಾರು ಇದ್ದಾರೆ, ಒಂದು team ಅಲ್ಲಿಯೇ ಹೋಗಿ ಇರುವ ಹಾಗೆ ಆಗಬೇಕು. ಈ disease control ಆಗುವ ವರೆಗೆ ಅವರು ಬರಬಾರದು. ಅದು ಬೀದರ್ ಇರಲಿ, ರಾಯಚೂರು ಇರಲಿ, ಗುಲ್ಬರ್ಗಾ ಇರಲಿ, ತುಮಕೂರು ಇರಲಿ, ಬಳ್ಳಾರಿ ಇರಲಿ ಐದಾರು team ಅನ್ನು constitute ಮಾಡಿ ನೀವು ಕಳುಹಿಸಿ ಮತ್ತು they should be made responsible. ಅಲ್ಲಿಂದೇನಾದರೂ ಪುನಃ ಕಾಯಿಲೆ ಬಂದಾಗ

naturally ಅವರಿಗೆ ಔಷಧಿ ಕೊಡುವ ಕೆಲಸವನ್ನು ಸರ್ಕಾರ ಮಾಡುತ್ತದೆ. ಅಲ್ಲಿಂದೇನಾದರೂ ಪುನಃ ಕಾಯಿಲೆ ಬಂದಾಗ ತಕ್ಷಣ control ಮಾಡುವುದಕ್ಕೆ ಇವರು ಮಾತ್ರ precaution ತೆಗೆದುಕೊಳ್ಳಬೇಕು. ಅದಕ್ಕಾಗಿ ಈ ತಕ್ಷಣ ಆ ಕೆಲಸವನ್ನು ತಾವು ಮಾಡಬೇಕು. ಮತ್ತು ಈಗಾಗಲೇ ಆ message ಅನ್ನು ಕಳುಹಿಸಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಹೇಳುತ್ತೇನೆ ಮತ್ತು ಸದನದ ಗಮನಕ್ಕೆ ಈ ವಿಷಯವನ್ನು ತಂದಿದ್ದೇನೆ.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ಪೂರಕ ಅಂದಾಜುಗಳ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳು ಮಂಡಿಸಿದಾಗ ಹೆಚ್ಚುವರಿ ಹಣದ ಬಗ್ಗೆ ಕೇಳಿದರು. ಹೆಚ್ಚುವರಿ ಹಣ ಇವತ್ತೇನು ಇಲಿ ಜ್ವರ ಎಲ್ಲಾ ಕಡೆಗೆ ಕರ್ನಾಟಕ ರಾಜ್ಯದಲ್ಲಿ ಹಬ್ಬುತ್ತಿದೆ. ಅದಕ್ಕೆ ತಾವು ಹೆಚ್ಚಿನ ಹಣವನ್ನು ಮಾನ್ಯ ಆರೋಗ್ಯ ಸಚಿವರಿಗೆ ಕೊಡಬೇಕೆಂದು ಆವಾಗ ನಾನು ಕೇಳಿಕೊಂಡಿದ್ದೆ. ಪೂರಕ ಅಂದಾಜಿನಲ್ಲಿ 16 ಸಾವಿರ ಕೋಟಿ ರೂಪಾಯಿಗಳನ್ನು ಮತ್ತೆ ಕೇಳಿದರು. ಅದರಲ್ಲಿ ನಾವು ಮಾನ್ಯ ಮಾಧುಸ್ವಾಮಿಯವರೆಲ್ಲ ಮಾತನಾಡಿದೆವು. ಇವತ್ತೇನಾಗುತ್ತದೆ ಎಂದರೆ ಬಜೆಟ್ ಮಂಡನೆ ಮಾಡಿದ ಮೇಲೆ ವಿಶೇಷವಾದ ಪರಿಸ್ಥಿತಿಯಲ್ಲಿ ಬೇರೆ ಬೇರೆ ಕಡೆಗೆ ಎಲ್ಲಿ ಖರ್ಚಾಗಬೇಕಾಗಿದೆ, ಅದರಲ್ಲಿ ತಾವು ಆರೋಗ್ಯ ಇಲಾಖೆಗೆ ಕೊಡಬೇಕೆಂದು ಕೇಳಿಕೊಂಡಿದ್ದೆವು. ಶ್ರೀಮಾನ್ ಅಶೋಕ್‌ರವರು ಆ ಭಾಗಕ್ಕೆ ಹೋಗಿ ಬಂದಿದ್ದಾರೆ. ಒಳ್ಳೆಯದಾಗಿದೆ. ಯಾವಾಗಲೂ ಕೂಡ ಆಗತಕ್ಕಂಥ ರೀತಿಯಲ್ಲಿ ನನಗೂ ಕೂಡ ಸಮಕ್ಷಮ ಭೇಟಿಯಾದಾಗ ನಿಮ್ಮ ಭಾಗಕ್ಕೆ ಹೋಗಿ ಬರಬೇಕು. ನನ್ನ ಮತಕ್ಷೇತ್ರಕ್ಕೆ ಕೂಡ ಹೋಗಿದ್ದರು. ಆದರೆ ಒಂದು ಮಾತು ಏನಾಗುತ್ತದೆಂದರೆ, ಯಾವಾಗಲೂ ಕೂಡ ಈ ಸಮ್ಮಿಶ್ರ ಸರ್ಕಾರ ಬಂದ ಮೇಲೆ ಆಯಾಯ ಪಕ್ಷದ ಕಾರ್ಯಕರ್ತರು ಹೋಗುತ್ತಾರೆ ಬರುತ್ತಾರೆ, ಅವರಿಗೂ ಕೂಡ ತೊಂದರೆ. ಆದರೂ ಕೂಡ ರಾತ್ರಿ ಅಲ್ಲೆಲ್ಲ ಹೋಗಿ ಬಂದಿದ್ದಾರೆ. ಶ್ರೀಮಾನ್ ಖರ್ಗೆಯವರು ಹೇಳಿದ ಹಾಗೆ ಯಾದಗಿರಿಯಲ್ಲಿ ಪ್ರಾರಂಭವಾಗಿದೆ. ನಮ್ಮಲ್ಲಿ ಬಿಳವಾರ ಗ್ರಾಮದಲ್ಲಿ ಆಗಿದೆ. ಬೇರೆ ಬೇರೆ ಕಡೆ ಎಲ್ಲ ಆಗಿದೆ. ಮಾನ್ಯ ಸಚಿವರು Hospitalಗೆ ಕೂಡ ಹೋಗಿ ಬಂದಿದ್ದಾರೆ. ಇವತ್ತು ಎಲ್ಲಾ ಕಡೆಗೆ ಇದೆ. ಇದರಿಂದ ಏನಾಗುತ್ತದೆಂದರೆ, ತಾವು ಪ್ರಪ್ರಥಮವಾಗಿ ಮಂತ್ರಿಗಳಾಗಿದ್ದೀರಿ. ಮಂತ್ರಿಗಳಾದ ಮೇಲೆ ತಾವು ಇಡೀ ರಾಜ್ಯಕ್ಕೆ ಮಂತ್ರಿಗಳಾಗಿದ್ದೀರಿ. ಇಡೀ ರಾಜ್ಯದ ಜನರ ಆರೋಗ್ಯವನ್ನು ನೋಡತಕ್ಕಂಥ ಜವಾಬ್ದಾರಿ ತಮಗಿದೆ. ತಾವು ಬಂದ ತಕ್ಷಣ ಎಲ್ಲಾ ಕಡೆಗೆ ಇಲಿ ಜ್ವರ ಹಬ್ಬುತ್ತಿದೆ. ಅಂಕಿಅಂಶಗಳ ಪ್ರಕಾರ ಅವರು ಹೇಳಿದ್ದಾರೆ. ಇವತ್ತು ಏನಾಗುತ್ತಿದೆ, ಈ ಒಂದು ಜ್ವರವನ್ನು ನಿಯಂತ್ರಣಕ್ಕೆ ತರತಕ್ಕಂಥ ರೀತಿಯಲ್ಲಿ ತಾವು ಬಹಳಷ್ಟು ಕೂಡ ಇಲ್ಲಿ ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಬೇಕು. ಬೇಕಾದರೆ ನಮ್ಮನ್ನು ಸಹ ಕರೆಸಿರಿ. ಮತ್ತೆ effective ಆಗಿ medicine ತರಿಸತಕ್ಕಂಥ ರೀತಿಯಲ್ಲಿ ಕೆಲಸ ಆಗಬೇಕು. ಬಹಳಷ್ಟು ಕಡೆ ಇವತ್ತು Doctors ಇಲ್ಲ.

Doctors ಇಲ್ಲ ಎಂದರೆ war footing ತರಹ ಕೆಲಸ ಮಾಡುವುದಕ್ಕೆ ಇಲ್ಲಿ ಇರತಕ್ಕಂಥ Doctorsಗೆ ಏನು ಕೆಲಸ ಇಲ್ಲ. ಅವರನ್ನು ಕೆಲವು ದಿವಸಗಳ ಸಲುವಾಗಿ ಆ ಭಾಗಕ್ಕೆ ತಾವು ಕಳುಹಿಸಬೇಕಾಗುತ್ತದೆ. ಬಹಳಷ್ಟು ನಮ್ಮ ಕಡೆ ಪ್ಲೇಗ್ ಎಂದು ಬರುತ್ತಿತ್ತು. ಆ ಪ್ಲೇಗ್‌ನಿಂದ ಎಲ್ಲ ಕಡೆ ಜನ ಸತ್ತು ಹೋಗುತ್ತಿದ್ದರು. ಔಷಧಿ ಇರಲಿಲ್ಲ, ಏನೂ ಇರಲಿಲ್ಲ. ಇವತ್ತು ಸಂಬಂಧಪಟ್ಟ ಆಡಳಿತ ಪ್ರಧಾನ ಕಾರ್ಯದರ್ಶಿಗಳಿದ್ದಾರೆ. ಈ ಇಲಾಖೆಯ ಎಲ್ಲಾ ಮುಖ್ಯಸ್ಥರನ್ನೂ ಕೂಡ you have to tell them strictly ನೀವು ನಿಯಂತ್ರಣಕ್ಕೆ ಬರುವವರೆಗೆ ಕೇಂದ್ರ ಸ್ಥಳಕ್ಕೆ ಬರಬಾರದೆಂದು ಹೇಳಬೇಕು. ಈಗಾಗಲೇ ತಾವು ಆದೇಶ ಕೊಟ್ಟಿರಬಹುದು. ಇದರ ಬಗ್ಗೆ ಬಹಳ ವಿಶೇಷವಾದ ರೀತಿಯಲ್ಲಿ ಕೆಲಸ ಮಾಡಬೇಕು. ನಿಮ್ಮ ಪ್ಲಾನ್ ಆಫ್ ಆಕ್ಷನ್ ಮೀಟಿಂಗ್‌ಗೆ ಈಗಾಗಲೇ ಹೋಗಿ ಬಂದಿದ್ದೀರಿ, ಇನ್ನೂ ಕೂಡ ಪದೇ ಪದೇ ಹೋಗಬೇಕು. ಇನ್ನೂ ಕೂಡ ಇದು ನಿಯಂತ್ರಣವಾಗಿಲ್ಲವೆಂದು ಸಿಇಒರವರು ಹೇಳಿದ್ದಾರೆ. ತಾವು ಕೆಲಸ ಮಾಡಿದ್ದೀರಿ. ಇನ್ನೂ ಕೂಡ ಬಹಳಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಆರ್. ಅಶೋಕ್ : ಮಾನ್ಯ ಉಪಾಧ್ಯಕ್ಷರೆ, ನಾನು ಉತ್ತರ ಕೊಡುತ್ತೇನೆ. ಕ್ಲಾರಿಫಿಕೇಷನ್ ಇದ್ದರೆ ನಂತರ ಕೇಳಲಿ.

ಉಪಾಧ್ಯಕ್ಷರು : ಮಾನ್ಯ ವೈಜನಾಥ ಪಾಟೀಲರು ಕೂಡ ಇಲಿ ಜ್ವರದ ಬಗ್ಗೆ ಕೇಳಿದ್ದಾರೆ. ಅವರು ಹೇಳುವುದನ್ನು ಕೇಳಿಬಿಟ್ಟು, ಉತ್ತರ ಕೊಟ್ಟುಬಿಡಿ.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಅನೇಕ ಕಡೆ ಟೆಸ್ಟ್ ಮಾಡಿರುತ್ತಾರೆ. ಚಿಕುನ್‌ಗುನ್ಯಾ ಮತ್ತು ಕೆಲವೊಂದು ಕಡೆಯಲ್ಲಿ ಅದು ಇಲಿ ಜ್ವರ ಎಂದಿದೆ. ಮಾನ್ಯ ಮಂತ್ರಿಗಳು ಗುಲ್ಬರ್ಗಾಕ್ಕೆ ಹೋದಾಗ, ಚಿಂಚೋಳಿಯಂಥ ತಾಲ್ಲೂಕಿನಲ್ಲಿ 22 ಹಳ್ಳಿಗಳಿಂದ ಇವತ್ತು ಪುನಃ ಪುನಃ ಫೋನ್ ಬರುತ್ತಿದೆ. ನಮ್ಮಲ್ಲಿ ಈ ರೋಗ ಬಂದಿದೆ. ಇಲಿ ಜ್ವರ ಪ್ರಾರಂಭವಾಗಿದೆ ಎಂದು ಫೋನ್ ಬರುತ್ತಿದೆ. ಊರಿಗೆ ಊರೇ 1 ಸಾವಿರ ಜನ ಇದ್ದ ಕಡೆ 700, 800 ಜನರಿಗೆ ಆ ಜ್ವರ ಬರುತ್ತಿದೆ. ಜನರು ಗಾಬರಿಗೊಂಡಿದ್ದಾರೆ. ವಿಶೇಷವಾಗಿ ನನ್ನ ಚಿಂಚೋಳಿ ತಾಲ್ಲೂಕಿನಲ್ಲಿ, ಗುಲಬರ್ಗಾ ಜಿಲ್ಲೆಯಲ್ಲಿ ಸಫಿಷಿಯಂಟ್ ಸ್ಟಾಫ್ ಇಲ್ಲ. ಅದಕ್ಕೆ ಹೆಚ್ಚು ಸ್ಟಾಫ್ ಒದಗಿಸಬೇಕು. ಕೆಲವೊಂದು ಸಾರಿ ಹೆಚ್ಚಿನ ಅಪಾಯಿಂಟ್‌ಮೆಂಟ್ ಮಾಡಿಕೊಳ್ಳಬೇಕು. ಎಂಬಿಬಿಎಸ್ ಡಾಕ್ಟರ್ಸ್ ಇರಲಿಲ್ಲವೆಂದರೆ, ಆಯುರ್ವೇದಿಕ್ ಡಾಕ್ಟರ್ಸ್ ಅಂಥವರನ್ನೆಲ್ಲ ಅಪಾಯಿಂಟ್‌ಮೆಂಟ್ ಮಾಡಿಕೊಳ್ಳಬೇಕು. ಇದರ ಸಲುವಾಗಿ ಕೇವಲ ಹಣ ಖರ್ಚು ಮಾಡುವುದಷ್ಟೇ ಅಲ್ಲ. ಎಲ್ಲಿ ರೋಗವಿಲ್ಲ ಅಲ್ಲಿನ ಡಾಕ್ಟರ್ಸ್ ಅನ್ನು ಬೇರೆ ಕಡೆಗೆ ಷಿಫ್ಟ್ ಮಾಡಿ ವಾರ್‌ಘಟಿಂಗ್ ರೀತಿಯಲ್ಲಿ ಅದು ನಿವಾರಣೆಯಾಗಬೇಕಾಗುತ್ತದೆ. ಆ ಕೆಲಸ ಆಗದೇ ಇದ್ದರೆ ಚಿಕುನ್ ಗುನ್ಯಾ, ಇಲಿ ಜ್ವರ ಮತ್ತೊಂದು ಬೆಳೆಯುತ್ತಿರುತ್ತದೆ. ಒಬ್ಬರಿಗೆ ಬಂತು ಎಂದರೆ ಊರಿಗೇ ಬಂತು ಎಂದು ನೂರಾರು ಜನ ಕೇಳುತ್ತಿರುತ್ತಾರೆ. ಮಾನ್ಯ ಮಂತ್ರಿಗಳೂ ಬಂದಿದ್ದರು.

ಹಣವನ್ನೂ ಒದಗಿಸಿದ್ದಾರೆ. ಅದರ ಜೊತೆಯಲ್ಲಿ ಔಷಧ ಎಲ್ಲ ಕಡೆ ಮುಟ್ಟುತ್ತಿಲ್ಲ. ವ್ಯಾಕ್ಸಿನ್ ಇಲ್ಲ, ಎಲ್ಲ ಕಡೆ ಅವ್ಯವಸ್ಥೆ ಇದೆ. ಈ ರೋಗ ಏಕ್‌ದಂ ಬಂದಿದೆ. ಆ ದೃಷ್ಟಿಯಿಂದ ಮಾನ್ಯ ಮಂತ್ರಿಗಳು, ವಿಶೇಷವಾಗಿ ಬೀದರ್, ಗುಲಬರ್ಗಾ, ರಾಯಚೂರು, ಬಳ್ಳಾರಿ ಈ ಭಾಗದಲ್ಲಿ ಮತ್ತು ರಾಜ್ಯದ ಅನೇಕ ಭಾಗಗಳಲ್ಲಿ ಈ ರೋಗವೇನು ಆವರಿಸಿಕೊಂಡಿದೆ ಅದರಿಂದ ಜನರು ಗಾಬರಿಗೊಂಡಿದ್ದಾರೆ; ಅಲ್ಲಿಗೆ ಪ್ರೊವೈಡ್ ಮಾಡಿದಂಥ ಡಾಕ್ಟರ್ಸ್ ಪ್ರೈವೇಟ್‌ಗೆ ಹೋಗುತ್ತಾರೆ. ಎಲ್ಲೋ 8–10 ರೂಪಾಯಿಗಳ ಔಷಧ ಇರುತ್ತವೆ. ಅವರು 500, 600 ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಅವರಿಗೆ ಅಷ್ಟು ಖರ್ಚು ಮಾಡುವುದಕ್ಕೆ ಶಕ್ತಿಯೂ ಇರುವುದಿಲ್ಲ. ಅವರು ಗಾಬರಿಗೊಂಡು ಏನಾಯಿತೆಂದು ಹೋಗುತ್ತಿದ್ದಾರೆ. ಅವರಿಗೆ ಧೈರ್ಯ ಹೇಳುವ ಕೆಲಸವಾಗಬೇಕಾಗಿದೆ. ಅಲ್ಲಿಯ ಜನ ಪ್ರತಿನಿಧಿಗಳು ನಾವೂ ಕೂಡ ಮಾಡಬೇಕಾಗುತ್ತದೆ. ಸರ್ಕಾರದ ವತಿಯಿಂದ ತಾವು ಹೆಚ್ಚಿನ ಡಾಕ್ಟರ್ಸ್‌ನ್ನು ಒದಗಿಸಬೇಕಾಗುತ್ತದೆ. ಎನ್‌ಜಿಓಗೆ ವ್ಯವಸ್ಥೆ ಮಾಡಿ ಜನರಿಗೆ ಧೈರ್ಯ ಹೇಳುವಂಥ ಕೆಲಸ ಮಾಡಬೇಕಾಗುತ್ತದೆ.

ಶ್ರೀ ವೀರಬಸವಂತ ರೆಡ್ಡಿ ಮುದ್ನಾಳ್ : ಮಾನ್ಯ ಉಪಾಧ್ಯಕ್ಷರೆ, ಯಾದಗೀರ್ ತಾಲ್ಲೂಕಿನಲ್ಲಿ, ಮಾನ್ಯ ಖರ್ಗೆ ಸಾಹೇಬರು ಹೇಳಿದ ಹಾಗೆ, ಅವರು ಹೇಳಿದ್ದನ್ನು ನಾನು ರಿಪೀಟ್ ಮಾಡುವುದಕ್ಕೆ ಹೋಗುವುದಿಲ್ಲ. ಮೂರು ವಿಷಯಗಳನ್ನು ಇಲ್ಲಿ ತಮ್ಮ ಗಮನಕ್ಕೆ ತರುತ್ತೇನೆ. ಡ್ರಗ್ಸ್ ವಿಷಯದ ಬಗ್ಗೆ, ನಮ್ಮ ಪ್ರೊಸೀಜರ್ಸ್ ಆಫ್ ಡಿಸ್ಟ್ರಿಬ್ಯೂಷನ್ ಏನಿದೆ, ಅವರು 2 ದಿವಸಗಳ ಸಲುವಾಗಿ ಹಾಸ್ಪಿಟಲ್‌ಗೆ ಕಳುಹಿಸುತ್ತಾರೆ. After they are over, again they start getting. ಅಂದರೆ, after a gap of two days, again. ಅದಕ್ಕಾಗಿ, ಇದನ್ನೂ ನಾವು ನಿವಾರಣೆ ಮಾಡಬೇಕು. How to distribute drugs continuously. ತಪ್ಪು ಮಾಹಿತಿ ನಡೆದಿದೆ. ಎರಡನೆಯದು, ಡಾಕ್ಟರ್ಸ್‌ಗಳ ಕೊರತೆ ಬಹಳವಿದೆ. 10, 15 ವಿಲೇಜ್ ನಡುವೆ ಒಬ್ಬ ಡಾಕ್ಟರ್ ಇರುತ್ತಾರೆ. All the villages are affected. ಅವನ ಕಡೆಯಿಂದ 15 ವಿಲೇಜ್‌ಗಳಿಗೆ ಹೋಗುವುದಕ್ಕೆ ಆಗುವುದಿಲ್ಲ. ಅವರಿಗೆ ಡಾಕ್ಟರ್ ಹೋಗಿ ಬಂದರೆ ಮಾತ್ರ ಸಮಾಧಾನವಾಗುತ್ತದೆ. ಕೇವಲ ಗುಳಿಗೆ ಕೊಟ್ಟರೆ ಆಗುವುದಿಲ್ಲ. ಎಲ್ಲೆಲ್ಲಿ ವೇಕೆಂಟ್ ಪೋಸ್ಟ್ ಇವೆ, ಅದರ ಬಗ್ಗೆ, if you can give us some idea and try to get them filled up, perhaps solution will be found out ಮೂರನೆಯದು, ಮಸ್ಕಿಟೊ ಎರಾಡಿಕೇಷನ್. ಡಿ.ಸಿ. ಆಫೀಸ್‌ನಲ್ಲಾಗಲಿ, ಎಲ್ಲಿಯೇ ಆಗಲಿ ನಾವು ವಾರ್‌ಘುಟಿಂಗ್‌ನಲ್ಲಿ ಇದರ ಬಗ್ಗೆ ಮಾಡಬೇಕೆಂದು ಹೋಗುತ್ತೇವೆ. Only on paper. But nobody really goes to the villages to do all this. ನಾವು ಡಿಸಿ ಆಫೀಸ್‌ನಲ್ಲಿ ಹೋಗಿ ಕುಳಿತು ಬಹಳ ದೊಡ್ಡ ಮೀಟಿಂಗ್ ಮಾಡುತ್ತೇವೆ. ವಾರ್‌ಘುಟಿಂಗ್‌ನಲ್ಲಿ 10, 15 ವೆಹಿಕಲ್ ಕೊಡುತ್ತೇವೆ. ಹಳ್ಳಿಗಳಿಗೆ ಹೋಗಿ ಯಾರೂ fogging machine ತೆಗೆದುಕೊಂಡು ಮಾಡುವುದು ಬಹಳ ಕಡಿಮೆ ಇದೆ. ಡಿಸಿಷನ್

ಅನ್ನು ಹೆಡ್‌ಕ್ವಾರ್ಟರ್‌ನಲ್ಲಿ ತೆಗೆದುಕೊಳ್ಳುತ್ತೇವೆ. ಆದರೆ, it is not percolating down to the villages. ಅದಕ್ಕಾಗಿ ದಯಮಾಡಿ, ಈ ಮೂರು ವಿಷಯದಲ್ಲಿ ಮ್ಯಾನ್ ಪವರ್‌ನಲ್ಲಿ ನಮಗೆ ಬಹಳ ಕೊರತೆ ಇದೆ. ಈ ಮೂರೂ ವಿಷಯಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಬೇಕಾಗಿ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಉಪಾಧ್ಯಕ್ಷರೆ, ಮೆಡಿಸಿನ್ ಕೊಡುವ ಟೈಂನಲ್ಲಿ ಡೈರೆಕ್ಟ್ ಆಗಿ ಲೂಟಿ ಮಾಡಿ ಅರ್ಧ ಸೇಲ್ ಮಾಡಿ, ಇನ್ನರ್ಧ ತೆಗೆದುಕೊಂಡು ಬರುತ್ತಾರೆ. ಸುಮಾರು ಸಲ ನಾನೂ ಅದನ್ನು ಮಾನಿಟರ್ ಮಾಡಿ ಇಟ್ಟಿದ್ದೇನೆ. ಅದನ್ನು ಹೈಯರ್ ಆಫೀಸರ್ ಗಮನಕ್ಕೆ ತೆಗೆದುಕೊಂಡು ಬಂದರೆ ಕ್ರಮ ತೆಗೆದುಕೊಳ್ಳುವುದಿಲ್ಲ. Share company, all your higher officers. It is a fact. ಪೊಲೀಸ್ ಕೆಲಸವನ್ನು ನಾನು ಮಾಡಬೇಕೋ? ವಿಜಿಲೆನ್ಸ್ ಕೆಲಸವನ್ನು ನಾನು ಮಾಡಬೇಕೋ? ಅದನ್ನು ನಾನು ಕರೆಕ್ಟ್ ಆಗಿ ತೋರಿಸಿದರೆ, officers will not take action on that. I am fed up. ಎಂಥ ಸ್ಥಿತಿಗೆ ಬಂದಿದ್ದೇವೆ. Yes it is a fact. ಚಿಕುನ್ ಗುನ್ಯಾಗೆ ಇಷ್ಟು ಇಂಪಾರ್ಟೆನ್ಸ್ ತೆಗೆದುಕೊಂಡಿರುವಾಗ ಮನುಷ್ಯರಿಗೆ ತೆಗೆದುಕೊಳ್ಳಬಾರದೆ? ಚಿಕುನ್‌ಗುನ್ಯಾಗೂ ಮೆಡಿಸನ್ ಬೇಕು, ಹಾವು ಕಡಿದರೂ ಮೆಡಿಸಿನ್ ಬೇಕು. I am talking as to how the distribution of medicines is going on. ಡಾಕ್ಟರ್‌ಗಳ ಕೊರತೆ ಬಗ್ಗೆ ಮಾತನಾಡಿದ್ದಾರೆ. ನೀವೇನು ಹೇಳುತ್ತೀರೆಂದರೆ, ಡಿ.ಸಿ. ಹತ್ತಿರ ಅರ್ಜಿ ಕೊಡಿ, ಅವರು ಮಾಡಿ ಬಿಡುತ್ತಾರೆನ್ನುತ್ತೀರಿ. ಡಿ.ಸಿ.ಯವರು ಅಷ್ಟು ಈಜಿಯಾಗಿ ಮಾಡಿಬಿಡುತ್ತಾರೆಯೇ? ಅರ್ಜಿ ಕೊಟ್ಟ ತಕ್ಷಣ ಅವರು ಹುಡುಕಿಕೊಂಡು ಬರುತ್ತಾರೆಯೇ? ಇಲ್ಲ. Then, what for is your Director? ಡಿಹೆಚ್‌ಒಗೆ ಹೇಳಬೇಕೆಂದರೆ, ನಮ್ಮ ಹಾಸ್ಪಿಟಲ್‌ಗೆ ಡಿಹೆಚ್‌ಒ ಬರುವುದಿಲ್ಲ. ಕೋಲಾರ ಡಿಹೆಚ್‌ಒಗೆ ಹೇಳಿದರೆ, ಅದು ನಮಗೆ ಬರುವುದಿಲ್ಲವೆನ್ನುತ್ತಾರೆ. ಅದು ಡೈರೆಕ್ಟರ್‌ಗೆ ಬರುತ್ತದೆನ್ನುತ್ತಾರೆ. ಡೈರೆಕ್ಟರ್‌ಗೆ ಹೇಳಿದರೆ, I will look into this matter. ಇಂಥ ಅಧಿಕಾರಿಗಳನ್ನಿಟ್ಟುಕೊಂಡು ನಾವು ಹೇಗೆ ಆರೋಗ್ಯ ಇಟ್ಟುಕೊಂಡು ಬಂದು ಹೇಗೆ ಭಾಷಣ ಮಾಡುವುದು? You think over it. ಆದುದರಿಂದ, ಬಿಷೋರ್ ಪ್ರಿಕಾಷನರಿ ಎಲ್ಲೆಲ್ಲಿ ಡಿಸೀಸ್ ಬಂದಿದೆ, ಅಲ್ಲಲ್ಲಿ ಮಾತ್ರ ಮೆಡಿಸಿನ್ ಕಳುಹಿಸಬೇಕೆಂದಲ್ಲ. ಎಲ್ಲಾ ಹಾಸ್ಪಿಟಲ್‌ಗಳೂ ತಯಾರಾಗಿರಬೇಕು. ಎರಡನೆಯದಾಗಿ, ನಿಜವಾಗಿಯೂ ಈ ಡಿಸೀಸ್ ಬಂದಿದೆಯೇ? ಇಲ್ಲ. ಮಲ್ಟಿನ್ಯಾಷನಲ್ ಕಂಪನಿಯವರು ಏನಾದರೂ ಮೆಡಿಸಿನ್ ಸೇಲ್ ಮಾಡುವುದಕ್ಕೋಸ್ಕರ ಈ ತರಹ ಒಂದು ರೂಮರ್ ಹಬ್ಬಿಸಿದ್ದಾರೆಯೇ? You must take up this issue and you must give flash news to the people. ಕೇವಲ ಚಿಕನ್ ತಿನ್ನುವುದು, ಲಾಸ್ ಆಗುವುದು ಅಲ್ಲ. ನಿಜವಾಗಲೂ, is it a fact? Whether this news is a fact or not? ಇಲ್ಲವೇ ಮೆಡಿಸಿನ್ ಸೇಲ್ ಮಾಡುವುದಕ್ಕೋಸ್ಕರ ಇಂಥ ಒಂದು ಐಡಿಯಾ ತೆಗೆದುಕೊಂಡಿದ್ದಾರೆಯೇ? It is a crooked cut-throat

competition in the economy ಈ ತರಹ ಏನಾದರೂ ಕೆಲಸ ಮಾಡುತ್ತಿದ್ದಾರೆಯೇ? ಎಂದು ತಾವು ಹೆಲ್ತ್ ಮಿನಿಸ್ಟರ್ ಆಗಿರುವವರು ಗಂಭೀರವಾಗಿ ದಿನಾ ಫ್ಲಾಷ್ ನ್ಯೂಸ್ ಮಾಡಬೇಕು. ಆದರೆ, ನಮ್ಮ ಹಾಸ್ಪಿಟಲ್ ಸುತ್ತಮುತ್ತಲ ವಿಲೇಜ್ including Kuppam, they are depending on that hospital ಹೆಲ್ತ್ ಸೆಕ್ರಟರಿ ಹೇಳಿದ ಮೇಲೆ ಕೇರ್ ತೆಗೆದುಕೊಂಡಿಲ್ಲ. ಹೆಲ್ತ್ ಡೈರೆಕ್ಟರ್ ಹೇಳಿದ ಮೇಲೆ ಕೇರ್ ತೆಗೆದುಕೊಂಡಿಲ್ಲ. ನಿಮ್ಮ ಡೈರೆಕ್ಟರ್ ಕೇವಲ ಟ್ರಾನ್ಸ್‌ಫರ್‌ಗಳನ್ನು ಕರೆದು ಕರೆದು ಮಾಡುತ್ತಾರೆ. What is this? You must take care. ತಾವು, Tell the Director to visit the hospital. ಒಂದು ಫ್ಯಾನ್‌ನ ವಿಂಗ್ ಹೋಗಿದ್ದರೆ, ಆ ಡಾಕ್ಟರ್ ಏನು ಮಾಡುವುದಕ್ಕಾಗುತ್ತದೆ ಸಾರ್, ನಾನು ನುಂಗಿ ಹಾಕಿಬಿಟ್ಟಿನೆ ಎಂದು ಕೇಳುತ್ತಾರೆ. ಇಂಥ ಪರಿಸ್ಥಿತಿಯಲ್ಲಿ ಆ ಹಾಸ್ಪಿಟಲ್‌ನಲ್ಲಿ 240 ಬೆಡ್ಸ್ ಇದೆ. kindly instruct your Secretary and Director to visit the hospital and take action. Thank you.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಖರ್ಗೆಯವರು ಒಳ್ಳೆಯ, ಪ್ರಾಮುಖ್ಯವಾದಂಥ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅವರು ಗಮನ ಸೆಳೆಯುವ ಅಥವಾ ಶೂನ್ಯ ವೇಳೆಯಲ್ಲಿ ಮಾತನಾಡುತ್ತಾ ಹೇಳಿದರು. ಕೋಳಿ ಜ್ವರ ಬಂದಿದೆ ಎಂದು ಎಲ್ಲ ಕಡೆ ಸಿಕ್ಕಾಪಟ್ಟೆ ಗುಲ್ಲೆದ್ದಿದೆ. ಇದರಿಂದೇನೆಂದರೆ, ಕೋಳಿ ಜ್ವರ ಬಂತು ಎಂದ ತಕ್ಷಣ ಕೋಳಿಗಳನ್ನೆಲ್ಲ ನಾಶ ಮಾಡಿಬಿಡುವುದು ಇದೆ. ಹಂದಿ ಜ್ವರ ಬಂತು ಎಂದರೆ ಒಂದು ಕಡೆಯಿಂದ ಹಂದಿಗಳನ್ನೆಲ್ಲ ಹೊಡೆದು ಹಾಕಿಬಿಡು ಎನ್ನುವುದು. ಪ್ರಶ್ನೆ ಇದಲ್ಲ. ಪ್ರಾಮಾಣಿಕವಾಗಿ ಜ್ವರ ಎಲ್ಲಿಂದ ಬಂತು? ಹೇಗೆ ಬಂತು? ಇದನ್ನು ಪರಿಣಾಮಕಾರಿಯಾಗಿ ನೋಡಬೇಕೆನ್ನುವುದು ಒಂದು. ಎರಡನೆಯದಾಗಿ, ಕೋಳಿ ಜ್ವರದಿಂದ ಕೋಳಿಗಳು ನಾಶವಾಗುತ್ತಿರುವುದರಿಂದ ಮಾಂಸದ ಬೆಲೆ ಈಗ ಸಿಕ್ಕಾಪಟ್ಟೆ ಜಾಸ್ತಿಯಾಗಿಬಿಟ್ಟಿದೆ. ವಿಪರೀತ ಜಾಸ್ತಿಯಾಗಿದೆ. ಆದ್ದರಿಂದ, ಅದರ ಬಗ್ಗೆಯೂ ಸಹ.....

ಶ್ರೀ ಮಲ್ಲಿಕಾರ್ಜುನ ಖರ್ಗೆ : ಚಿಕುನ್‌ಗುನ್ಯಾ ಎನ್ನುವುದು ಡಿಸೀಸ್ ಹೆಸರು. ಚಿಕನ್ ಎಂದರೆ ಚಿಕನ್ ತಿಂದರೆ ಜ್ವರ ಬರುವುದು ಅಥವಾ ಚಿಕನ್ ತಿನ್ನಬೇಡಿ ಎನ್ನುವ ಪ್ರಶ್ನೆಯಲ್ಲ ಇದು. The name of the diseasse itself is Chicken Gunya. ಈ ಚಿಕುನ್‌ಗುನ್ಯಾ ರೋಗವನ್ನು ಹೇಗೆ ತಡೆಗಟ್ಟಬೇಕು? ಎಂದು ಯೋಚಿಸಬೇಕು. ಪಾಪ ಹಳ್ಳಿಯ ಜನರು ಅವರು ತಿನ್ನುವುದು ಒಂದು ಹೊತ್ತಿನ ರೊಟ್ಟಿ. ಅನ್ನ ಸಿಗುವುದಿಲ್ಲ. ಬೇಳೆ ಸಿಗುವುದಿಲ್ಲ. ಅವರು ಚಿಕನ್ ಎಲ್ಲಿ ತಿನ್ನುವುದಕ್ಕೆ ಹೋಗುತ್ತಾರೆ? ಇದು ಅದರ ಪ್ರಶ್ನೆಯಲ್ಲ. Mosquito may be the cause of this disease. ಸೊಳ್ಳೆ ಕಚ್ಚಿದರೆ ಬರುವ ರೋಗವಿದು. ಅದಕ್ಕೆ ಚಿಕುನ್‌ಗುನ್ಯಾ ರೋಗವೆನ್ನುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಅದೇ ಬೇರೆ ಇದೇ ಬೇರೆ. ನಾನು ಅದನ್ನು ಹೇಳುತ್ತಿಲ್ಲ. ಅದರ ಜೊತೆಗೆ, ರಾಜ್ಯದಲ್ಲಿ ಕೋಳಿ ಜ್ವರ ಬಂದಿದೆ. ಅದನ್ನು ನಾನು ನಿಮ್ಮ

ಗಮನಕ್ಕೆ ತರುತ್ತಿದ್ದೇನೆ. ತಾವು ಅನೇಕರು ನೋಡಿದ್ದೀರಿ. ಕೋಳಿ ಜ್ವರ ಬಂದು ಲಕ್ಷಾಂತರ ಕೋಳಿಗಳನ್ನು ಕೊಂದು ಹಾಕಿದ್ದಾರೆ. ಕೋಳಿ ಸಾಕಾಣಿಕೆ ಮಾಡತಕ್ಕಂಥವರ ಪರಿಸ್ಥಿತಿ ಹದಗೆಟ್ಟು ಅವರು ಬೀದಿಗೆ ಬರುತ್ತಿದ್ದಾರೆ. ಕೋಟ್ಯಾಂತರ ರೂಪಾಯಿ ನಷ್ಟ ಮಾಡುತ್ತಿದ್ದಾರೆ. ಅವರ ಬಗ್ಗೆ ಸರ್ಕಾರವೇನು ಕ್ರಮ ಕೈಗೊಂಡಿದೆ? ಇದಕ್ಕೂ, ಅದಕ್ಕೂ ಸಂಬಂಧವಿಲ್ಲ. ಅದನ್ನೂ ಹೇಳುವಾಗ ತಾವು ಹೇಳಿ. ಈ ರಾಜ್ಯದಲ್ಲಿ ಕೋಳಿಗಳನ್ನೆಲ್ಲ ಸಂಪೂರ್ಣವಾಗಿ ನಾವು ನಾಶ ಮಾಡಿಬಿಡುತ್ತೇವೆ. ಇನ್ನು ಕೋಳಿಯನ್ನು ಯಾರೂ ಸಾಕಬೇಕಾಗಿಲ್ಲ. ಕೋಳಿಯನ್ನು ಸಾಕುವುದಕ್ಕೋಸ್ಕರ ಬ್ಯಾಂಕಿನಿಂದ ತೆಗೆದುಕೊಂಡು ಬಂದಿರುವ ಹಣವನ್ನೆಲ್ಲ ನಾವು ರದ್ದು ಮಾಡಿದ್ದೇವೆಂದು ಹೇಳಿ.

ಉಪಾಧ್ಯಕ್ಷರು : ಮಾನ್ಯ ಅಶೋಕ್‌ರವರೆ ಉತ್ತರ ಪ್ರಾರಂಭಿಸಿರಿ. ಉತ್ತರ ಹೇಳಿ. ಸಚಿವರು ಉತ್ತರ ಕೊಡುತ್ತಾರೆ.

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಚಿಕುನ್ ಗುನ್ಯಗೂ ಬರ್ಡ್ ಫ್ಲೂಗೂ ಏನೂ ಸಂಬಂಧವಿಲ್ಲ. ಚಿಕುನ್ ಗುನ್ಯಾ ಅನ್ನುವುದು ಸೊಳ್ಳೆಗಳಿಂದ ಬರತಕ್ಕಂಥ ರೋಗ. ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿರುವ ವಿಷಯವೂ ಇದೆ. ಅದು ಪ್ರತ್ಯೇಕ ವಿಷಯ ಇದೆ. ಅದು ಬಹಳ ಜ್ವಲಂತವಾದಂಥ ಸಮಸ್ಯೆ ಕರ್ನಾಟಕದಲ್ಲಿ ಇವತ್ತು ಇದೆ. ಅದರಿಂದ ಬಹಳಷ್ಟು ರೈತರಿಗೆ ಇವತ್ತು ಅನ್ಯಾಯವಾಗಿದೆ. ಸಾವಿರಾರು ಲಕ್ಷ ರೂಪಾಯಿಗಳಷ್ಟು ಅನ್ಯಾಯವಾಗಿದೆ, ಅದರ ಬಗ್ಗೆ ನಾನು ನಂತರ ಹೇಳುತ್ತೇನೆ. ಮಾನ್ಯ ಖರ್ಗೆಯವರಿಗೆ ಹೇಳುವುದೇನೆಂದರೆ, ಇದು ಮೊದಲ ಭಾರಿ 1779 ನೇ ಇಸವಿಯಲ್ಲಿ ಇಂಡೋನೇಶಿಯಾದಲ್ಲಿ ಕಾಣಿಸಿಕೊಂಡಿತು. ಅದಾದ ನಂತರ ಈಸ್ಟ್ ಆಫ್ರಿಕಾದಲ್ಲಿ 1823 ರಲ್ಲಿ ಬಂತು. ನಮ್ಮ ದೇಶಕ್ಕೆ ಅದಾದ ಮೇಲೆ ಬಂದಿದೆ, ಇಲ್ಲಿ 1824ನೇ ಇಸ್ವಿ, 1871ನೇ ಇಸ್ವಿಯಲ್ಲಿಯೂ ಈ ರೋಗ ಬಂದಿತ್ತು. ಮೊದಲು ಆಂಧ್ರ ಪ್ರದೇಶದ ರಾಜಮಂಡ್ರಿಯಲ್ಲಿ ಕಾಣಿಸಿಕೊಂಡಿತು. ಅಲ್ಲಿಂದ ಇದು ಕರ್ನಾಟಕ, ಓರಿಸ್ಸಾ, ಮಹಾರಾಷ್ಟ್ರಕ್ಕೆ ಇದು ಬಂದಿದೆ. ಮಾನ್ಯ ವಿರೋಧ ಪಕ್ಷದ ನಾಯಕರು, ನಾನು ಆರೋಗ್ಯ ಮಂತ್ರಿಯಾದ ಮೇಲೆ ಇಲಿ ಜ್ವರ ಎಲ್ಲಾ ಬಂದು ಬಿಟ್ಟಿತು ಎಂದು ಹೇಳಿದರು. ದಯವಿಟ್ಟು ಕ್ಷಮಿಸಬೇಕು. ನಾನು ಬಂದ ಮೇಲೆ ಇದು ಬಂದಿಲ್ಲ. ಇದು ಡಿಸೆಂಬರ್ 25ನೇ ತಾರೀಖು ಈ ರೋಗ ಕರ್ನಾಟಕದಲ್ಲಿ ಕಾಣಿಸಿಕೊಂಡಿದೆ. ಅವರು ಬಂದು ಅಂಟಿಸಿಬಿಟ್ಟು ಹೋದರು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವು ಬಂದ ಮೇಲೆ ಬಂತು ಎಂದು ಯಾರು ಹೇಳಲಿಲ್ಲ ಈ ಸರ್ಕಾರ ಬಂದ ಮೇಲೆ ಬಂತು ಎಂದು ಹೇಳಿರುವುದು.

ಶ್ರೀ ಆರ್. ಅಶೋಕ್ : ನಾನೇನು ಅದನ್ನು ಬೇರೆ ರೀತಿಯಲ್ಲಿ ಹೇಳಲಿಲ್ಲ. ಅದನ್ನು ತಾವು ಬಹಳ ಸ್ಪೋರ್ಟಿವ್ ಆಗಿ ತೆಗೆದುಕೊಳ್ಳಬೇಕು. ಅವರು ಅದನ್ನು ತಮಾಷೆಯಾಗಿ ಹೇಳಿದರು. ಹೀಗಾಗಿ ನಾನು ಹೇಳುತ್ತಿದ್ದೇನೆ. ನಾನು ಬಂದ ಮೇಲೆ

ಇದು ಬಂದಿಲ್ಲ. ಡಿಸೆಂಬರ್‌ನಲ್ಲಿ ನಮ್ಮ ರಾಜ್ಯದಲ್ಲಿ ಇದು ಕಾಣಿಸಿಕೊಂಡಿದೆ. ನಿಜಕ್ಕೂ ಹಿರಿಯ ಸದಸ್ಯರಾದ ಮಾನ್ಯ ಖರ್ಗೆಯವರು ಹಾಗೂ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ, ದಿನದಿನಕ್ಕೆ ಇದು ಜಾಸ್ತಿಯಾಗುತ್ತಿದೆ. ಮೊದಲು ಮೂರು ಜಿಲ್ಲೆಯಲ್ಲಿ ಇದ್ದದ್ದು ಇವತ್ತು 7–8 ಜಿಲ್ಲೆಗಳಿಗೆ ಹಬ್ಬಿರುವುದು, ನಿಜಕ್ಕೂ ಸತ್ಯವಿದೆ. ಈಗಾಗಲೇ ನಾನು ಅದರ ಬಗ್ಗೆ ನೋಡಲು ಪಾವಗಡಕ್ಕೆ ಹೋಗಿ ಬಂದಿದ್ದೇನೆ. ನಾನು ಪಾವಗಡಕ್ಕೆ ಹೋದ ಮೇಲೆ ಅಲ್ಲಿ ಮಾಡಿದಂಥ ಕೆಲಸ ಹಾಗೂ ಕೊಟ್ಟಂಥ ನಿರ್ದೇಶನದ ಮೇಲೆ ಇವತ್ತು ಪಾವಗಡ ಟೌನ್ ಏನಿದೆ, ಅಲ್ಲಿಗೆ ನಾನು ಭೇಟಿ ಮಾಡಿ ಟೌನ್‌ನಲ್ಲಿ ಹಾಗೂ ಸುತ್ತ ಇರತಕ್ಕಂಥ ಮೂರು ವಿಲೇಜ್‌ಗಳಲ್ಲಿ ಬಂದಿತ್ತು. ಆ ಸಂದರ್ಭದಲ್ಲಿ ನಾನು ಪಾವಗಡ ಟೌನ್‌ಗೆ ಹೋಗಿ ಈ ಎಲ್ಲಾ ವ್ಯವಸ್ಥೆಗಳನ್ನು ಮಾಡಿದ ಮೇಲೆ ನೂರಕ್ಕೆ ಎಂಬತ್ತು ಪರ್ಸೆಂಟ್ ಖಾಯಿಲೆ ಅಲ್ಲಿ ಹೋಗಿದೆ. ಅದೇ ರೀತಿಯಾದ ವ್ಯವಸ್ಥೆಯನ್ನು ಇಡೀ ರಾಜ್ಯದಲ್ಲಿ ಮಾಡಬೇಕು ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ನನಗೆ ಕಳೆದ 15 ದಿವಸಗಳ ಹಿಂದೆಯೇ ಹೇಳಿದರು. ಈ ರೀತಿ ಬಂದಿದೆ ಅಲ್ಲಿ ಸೂಕ್ತ ವ್ಯವಸ್ಥೆ ಮಾಡಬೇಕೆಂದು ಹೇಳಿದಾಗ, ನಾನೇ ಸ್ವತಃ ಭೇಟಿ ಮಾಡಿದೆ. ಈ ಎಲ್ಲಾ ಜಿಲ್ಲೆಗಳಿಗೆ ರಾಯಚೂರು, ಗುಲ್ಬರ್ಗಾ, ಬೀದರ್ ಜಿಲ್ಲೆಗಳಿಗೆ ನಾನೇ ಸ್ವತಃ ಹೋಗಿ ಅಲ್ಲಿನ ಎಫೆಕ್ಟೆಡ್ ಆಗಿರತಕ್ಕಂಥ ವಿಲೇಜ್‌ಗಳಿಗೆ ನಾನು ಭೇಟಿ ಮಾಡಿದ್ದೆ ಮತ್ತು ಅಲ್ಲಿನ ಎಲ್ಲಾ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಒಂದು ಸಮಿತಿಯನ್ನು ನಾನು ಮಾಡಿದ್ದೇನೆ. ಅಲ್ಲಿನ ಎಲ್ಲಾ ಜಿಲ್ಲಾಧಿಕಾರಿಗಳು ಇದರ ಹೆಡ್ ಆಗಿರುತ್ತಾರೆ. ಇವರ ನೇತೃತ್ವದಲ್ಲಿ ಅಲ್ಲಿರತಕ್ಕಂಥ ತಹಸೀಲ್ದಾರ್‌ರವರು, ನಮ್ಮ ಡಿಹೆಚ್‌ಒಗಳು ನಮ್ಮ ಎಲ್ಲಾ ವೈದ್ಯಾಧಿಕಾರಿಗಳ ಸಮಿತಿಯನ್ನು ಮಾಡಿ ಪ್ರತಿದಿನ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಯಾವುದೇ ಕಾರಣಕ್ಕೂ ಎಲ್ಲಿಯೂ ಔಷಧಿಯ ಕೊರತೆ ಬರಬಾರದೆಂದು ನಾನು ಈಗಾಗಲೇ ಆದೇಶ ಕೊಟ್ಟಿದ್ದೇನೆ. ಎಲ್ಲಿಯೂ ನನಗೆ ತಿಳಿದ ಹಾಗೆ ಒಂದು ಕಡೆ ಮಾತ್ರ ನಾನು ರಾಯಚೂರಿಗೆ ಹೋಗಿದ್ದಾಗ, ಒಬ್ಬ ಅಲ್ಲಿನ ತಾಲ್ಲೂಕಿನ ವೈದ್ಯಾಧಿಕಾರಿ, ಕರ್ತವ್ಯ ನಿರ್ಲಕ್ಷ್ಯ ಮಾಡಿ ಒಂದು ದಿನ ಅಲ್ಲಿ ಔಷಧಿ ಬಂದಿಲ್ಲವೆಂದು ನನಗೆ ದೂರು ಬಂತು. ಕೂಡಲೇ ಆ ತಾಲ್ಲೂಕಿನ ವೈದ್ಯಾಧಿಕಾರಿಯನ್ನು ಅಲ್ಲಿಂದ ನಾನು ತೆಗೆದು ಹಾಕಿ ಬೇರೆ ಎಫರ್ಟ್ ಆಗಿ ಕೆಲಸ ಮಾಡತಕ್ಕಂಥ ಅಧಿಕಾರಿಯನ್ನು ಹಾಕಿ ಎಂದು ಆದೇಶ ಮಾಡಿ ಬಂದಿದ್ದೇನೆ. ಆದುದರಿಂದ ಈ ಸಂದರ್ಭದಲ್ಲಿ ಇದೊಂದು ರೀತಿಯಲ್ಲಿ ವಾರ್‌ಘುಟಿಂಗ್ ರೀತಿಯಲ್ಲಿ ಕೆಲಸ ಮಾಡಬೇಕಾಗಿದೆ. ಮಾನ್ಯ ಖರ್ಗೆಯವರು ಹೇಳಿದ ಹಾಗೆ ವಾರ್‌ಘುಟಿಂಗ್‌ನಲ್ಲಿ ಮಾಡಬೇಕಾಗಿದೆ. ಇದಕ್ಕೋಸ್ಕರ ನಾವು ಏನೆಲ್ಲಾ ಕ್ರಮಗಳನ್ನು ತೆಗೆದುಕೊಳ್ಳಬೇಕು. ಔಷಧಿಗಳ ಕೊರತೆ ಆಗಬಾರದೆಂದು ನಾವು ಈಗಾಗಲೇ ಸರ್ಕಾರದಿಂದ ಔಷಧಿಗಳನ್ನು ಕಳುಹಿಸಿಕೊಡುತ್ತಿದ್ದೇವೆ. ಅದರ ಜೊತೆಗೆ ನಾವು ಎಲ್ಲಾ ಜಿಲ್ಲಾ ಕೇಂದ್ರಗಳಿಗೆ ಒಂದೊಂದು ಜಿಲ್ಲಾಧಿಕಾರಿಗಳ ಅವರ ಹೆಡ್‌ನಲ್ಲಿ ಸುಮಾರು 14 ಲಕ್ಷ ರೂಪಾಯಿಗಳನ್ನು ಈಗಾಗಲೇ ಕಳುಹಿಸಿಕೊಟ್ಟಿದ್ದೇವೆ.

14 ಲಕ್ಷ ರೂಪಾಯಿಗಳನ್ನು ಫಸ್ಟ್ ಪೇಸ್‌ನಲ್ಲಿ ನಾವು ಕಳುಹಿಸಿಕೊಟ್ಟಿದ್ದೇವೆ. ನಾನು ಮೊನ್ನೆ ಭೇಟಿ ಮಾಡಿದಾಗ ಕೆಲವು ಜಿಲ್ಲೆಗಳಿಗೆ 25 ಲಕ್ಷ, ಕೆಲವು ಜಿಲ್ಲೆಗಳಿಗೆ 10 ಲಕ್ಷ ಈ ರೀತಿ ಬಿಡುಗಡೆ ಮಾಡಿದ್ದೇವೆ. ಇದು ಏತಕ್ಕೆ ಕೊಡುತ್ತಿದ್ದೇವೆಂದರೆ, ನಾವು ಕಳುಹಿಸಿರುವುದರಲ್ಲಿ ಔಷಧಿ ಏನಾದರೂ ಕಡಿಮೆ ಬಂದರೆ, ಅವರೇ ಡೈರೆಕ್ಟಾಗಿ ಪರ್ಚೇಸ್ ಮಾಡಬಹುದು. ಅವರೇ ಪ್ರೈವೇಟ್ ಆಗಿ ಬೇರೆ ಕಡೆಯಿಂದ ಪರ್ಚೇಸ್ ಮಾಡಿ ರೋಗಿಗಳಿಗೆ ತೊಂದರೆಯಾಗದ ರೀತಿಯಲ್ಲಿ ಔಷಧಿ ಕೊಡಲಿ ಎನ್ನುವ ದೃಷ್ಟಿಯಿಂದ ಅವರೆಲ್ಲರಿಗೂ ತಾಲ್ಲೂಕು ವೈದ್ಯಾಧಿಕಾರಿಗಳಿಗೂ ಒಂದೊಂದು ಲಕ್ಷ ಬಿಡುಗಡೆ ಮಾಡಿದ್ದೇವೆ. ಅಂದರೆ ಏನಾದರೂ ನಮ್ಮಲ್ಲಿರತಕ್ಕಂಥ ಮೆಡಿಸೆನ್ಸ್ ಷಾರ್ಟೇಜ್ ಆದರೆ ಅವರು ನಮ್ಮ ಕಾಯಬೇಕಾದ ಅವಶ್ಯಕತೆಯಿಲ್ಲವೇ ಇಲ್ಲ. ಅವರು ಡೈರೆಕ್ಟಾಗಿ ಮಾರ್ಕೆಟ್‌ನಲ್ಲಿ ಪರ್ಚೇಸ್ ಮಾಡಬಹುದು. ಆ ರೀತಿಯಾದಂಥ ಅನುಮತಿಯನ್ನು ನಾವು ಕೊಟ್ಟಿದ್ದೇವೆ. ಈಗಾಗಲೇ ಅಲ್ಲಿ ವೈದ್ಯರ ಮುಖಾಂತರ ಹಳ್ಳಿಗಳಿಗೆ ಹೋಗಿ ಅಲ್ಲಿರತಕ್ಕಂಥ....

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಮಂತ್ರಿಗಳು ತಾವು ಎಲ್ಲಾ ಕಡೆ ಹಣ ಕೊಡುತ್ತೇನೆಂದು ಹೇಳಿದಿರಿ ಸಂತೋಷ. ಔಷಧಿಯನ್ನು ಕೂಡ ಸಪ್ಲೈ ಮಾಡುತ್ತಿದ್ದಾರೆ. ನನ್ನ ಅನಿಸಿಕೆ ಏನೆಂದರೆ, 17,860 ರೋಗಿಗಳು ಒಂದೇ ಜಿಲ್ಲೆಯಲ್ಲಿ ಇದ್ದಾರೆ. ಅದರೊಳಗೆ ಸುಮಾರು 13 ಸಾವಿರದಷ್ಟು ನಮ್ಮ ತಾಲ್ಲೂಕಿನಲ್ಲಿ ರೋಗಿಗಳಿದ್ದಾರೆಂದು ಸಿಇಒ ನಿಂದ ಫ್ಯಾಕ್ಸ್ ಬಂದಿದ್ದನ್ನು ನಾವು ಹೇಳುತ್ತಿದ್ದೇವೆ. 13 ಸಾವಿರಕ್ಕಿಂತಲೂ ಹೆಚ್ಚಿನ ಜನರಿಗೆ ಯಾದಗಿರಿ ತಾಲ್ಲೂಕಿನಲ್ಲಿ ಈ ರೋಗ ಬಂದಿದೆ. ಅಂದರೆ ಒಂದು ಲಕ್ಷ ರೂಪಾಯಿ ಅಲ್ಲಿ ಹೇಗೆ ಸಾಕಾಗುತ್ತದೆ? ನಾನು ಅದಕ್ಕೆ ಹೇಳಿದ್ದು. ನೀವು ಡಿಹೆಚ್‌ಒ ಮತ್ತು ಡೆಪ್ಯೂಟಿ ಕಮೀಷನರ್‌ಗೆ ಡಿಸಿಕ್ರಿಷನ್ ಕೊಟ್ಟು ಇದು ನಿಮ್ಮ ಜವಾಬ್ದಾರಿ. ದುಡ್ಡು ಕಡಿಮೆ ಬಿದ್ದರೂ ಕೂಡ ನೀವು ರೀಅಪ್ರೊಪ್ರಿಯೇಟ್ ಮಾಡಿಕೊಳ್ಳಿ. ಖರ್ಚು ಮಾಡಿ ನಾವು ಆಮೇಲೆ ರೀಇಂಬರ್ಸ್ ಮಾಡುತ್ತೇವೆ. ಇಲ್ಲವೆಂದರೆ, ಜಿಲ್ಲಾ ಪಂಚಾಯತ್‌ನಲ್ಲಿ ಹೆಲ್ತ್ ಡಿಪಾರ್ಟ್‌ಮೆಂಟ್‌ನಿಂದ ಅಥವಾ ಸಿಇಒ ಡಿಸ್ಕ್ರಿಷನ್‌ನಲ್ಲಿರುವ ಹಣವನ್ನು ಉಪಯೋಗ ಮಾಡಿಕೊಳ್ಳಿ ಅದಕ್ಕೆ ರೀಇಂಬರ್ಸ್‌ಮೆಂಟ್ ಮಾಡುತ್ತೇವೆಂದು ನೀವು ಅವರಿಗೆ ಫುಲ್ ಅಥಾರಿಟಿ ಕೊಟ್ಟು ದೆನ್ ಯೂ ಟೇಕ್ ಆ್ಯಕ್ಷನ್. ಪಾಪ ಯಾರಿಗೊ ಒಬ್ಬ ಆಫೀಸರ್‌ಗೆ ನಾವು ಹೋದ ತಕ್ಷಣ ಸಸ್ಪೆಂಡ್ ಮಾಡಿದರೆ, ಅವನ ಹತ್ತಿರ ದುಡ್ಡು ಇಲ್ಲ ಔಷಧಿ ಇಲ್ಲ, ಜನರಿಗೆ ಸಮಾಧಾನ ಮಾಡುವುದಕ್ಕೋಸ್ಕರ ಸಸ್ಪೆಂಡ್ ಮಾಡಿದರೆ ಅದು ಉಪಯೋಗವಾಗುವುದಿಲ್ಲ. ದುಡ್ಡು ಕೊಟ್ಟು ಔಷಧಿ ಕೊಟ್ಟು ಅವನು ಕೆಲಸ ಮಾಡದೇ ಇದ್ದರೆ ಯೂ ಟೇಕ್ ಆ್ಯಕ್ಷನ್. ಆಗ ಒಂದು ಒಳ್ಳೆಯ ವಾತಾವರಣವನ್ನು ಆಡಳಿತದಲ್ಲಿ ತರುವುದಕ್ಕೆ ಅನುಕೂಲವಾಗುತ್ತದೆ. ಅದಕ್ಕೆ ದಯವಿಟ್ಟು ಅವಶ್ಯಕತೆಗನುಸಾರವಾಗಿ ದುಡ್ಡು ಬಿಡುಗಡೆ ಮಾಡಿ. ಅವಶ್ಯಕತೆಗನುಸಾರ ಔಷಧಿಗಳನ್ನು ಹಂಚಿಕೆ ಮಾಡಿ ಇದು ಬಹಳ ಮುಖ್ಯ.

ಶ್ರೀ ಆರ್. ಅಶೋಕ : ಮಾನ್ಯ ಖರ್ಗೆಯವರು ಹೇಳಿದ ಹಾಗೆ, ನಾನು ಅಧಿಕಾರಿಯನ್ನು ಹಾಗೆಯೇ ಸಸ್ಪೆಂಡ್ ಮಾಡಿಲ್ಲ. ದುಡ್ಡುಕೊಟ್ಟು ಅದರಲ್ಲಿ ಒಂದು ರೂಪಾಯಿ ಉಪಯೋಗ ಮಾಡಿಕೊಂಡಿರಲಿಲ್ಲ ಅದಕ್ಕೋಸ್ಕರ ಅವನ ಮೇಲೆ ಕ್ರಮ ತೆಗೆದುಕೊಂಡಿದ್ದೇನೆಯೇ ಹೊರತು, ಬೇರೆ ಅನ್ಯಥಾ ಏನೂ ಇಲ್ಲ. ಈಗಾಗಲೇ ಜಿಲ್ಲಾಧಿಕಾರಿಗಳ ಮೂಲಕ ಒಂದೊಂದು ಜಿಲ್ಲೆಗೆ ನನಗೆ ತಿಳಿದ ಹಾಗೆ ಗುಲ್ಬರ್ಗಾ ಜಿಲ್ಲೆಗೆ ನಿನ್ನೆ 25 ಲಕ್ಷ ರೂಪಾಯಿ ಅನೌನ್ಸ್ ಮಾಡಿ ಬಂದಿದ್ದೇವೆ. ಗುಲ್ಬರ್ಗಾ ಜಿಲ್ಲೆಯಲ್ಲಿ ಬಹಳ ಸೀವಿಯರ್ ಆಗಿ ಎಫೆಕ್ಟ್ ಆಗಿರುವುದು. ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ಗುಲ್ಬರ್ಗಾ ಜಿಲ್ಲೆಯಲ್ಲಿ ಬಹಳ ಜಾಸ್ತಿ ಆಗಿರುವುದು. ಅದಕ್ಕೋಸ್ಕರ ಹೆಚ್ಚು ಹಣವನ್ನು ನಾನು ಅಲ್ಲಿ 25 ಲಕ್ಷ ಬಿಡುಗಡೆ ಮಾಡಿದ್ದೇನೆ. ಈ ಹಿಂದೆನೂ ಅಲ್ಲಿ ಸುಮಾರು 36 ಲಕ್ಷ ರೂಪಾಯಿ ಬಿಡುಗಡೆಯಾಗಿತ್ತು. ಅದರ ಜೊತೆಗೆ ಈ 25 ಲಕ್ಷ ರೂಪಾಯಿ ಬಿಡುಗಡೆ ನಾವು ಮಾಡಿದ್ದೇವೆ. ಇದಕ್ಕೆ ಮುಖ್ಯವಾಗಿ ಬೇಕಾಗಿರತಕ್ಕಂಥದ್ದು ಫಾಗಿಂಗ್ ಮಿಷನ್ಸ್. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ, ಈ ಫಾಗಿಂಗ್ ಮಿಷನ್ಸ್ ಒಂದೇ ಸಾರಿ ಇಷ್ಟೊಂದು ಪ್ರಮಾಣದಲ್ಲಿ ಸಿಕ್ಕದೇ ಇರುವುದು ನಮಗೆ ತೊಂದರೆಯಾಗಿದೆ. ಅದಕ್ಕೋಸ್ಕರ ನಾವು ತಮಿಳುನಾಡಿನಲ್ಲಿ ಬಾಡಿಗೆಗಾದರೂ ತೆಗೆದುಕೊಂಡು ಬನ್ನಿ ಎಂದು ತಮಿಳುನಾಡು ಮತ್ತು ಮಹಾರಾಷ್ಟ್ರಕ್ಕೆ ನಾವು ಕಾಂಟೆಕ್ಟ್ ಮಾಡುತ್ತಿದ್ದೇವೆ. ಕಾಂಟೆಕ್ಟ್ ಮಾಡಿ ಅಲ್ಲಿಂದ ಫಾಗಿಂಗ್ ಮಿಷನ್ಸ್ ತೆಗೆದುಕೊಂಡು ಬರುತ್ತಿದ್ದೇವೆ. ಈಗಾಗಲೇ ಕೆಲವು ಕಡೆ 20 ರಿಂದ 25 ಫಾಗಿಂಗ್ ಮಿಷನ್‌ಗಳನ್ನು ಎಲ್ಲಾ ಜಿಲ್ಲೆಗಳಿಗೆ ನಾವು ಕೊಡುತ್ತಿದ್ದೇವೆ. ಕೊಟ್ಟ ಮೇಲೆ ಔಷಧಿ ಸಿಂಪರಣೆ ಮಾಡತಕ್ಕಂಥದ್ದು ನಡೆಯುತ್ತಿದೆ. ಅದರಲ್ಲಿ ಒಂದು ತಾವು ಗಮನಹರಿಸಬೇಕಾಗಿರುವುದು ಏನೆಂದರೆ, ಈ ಸೊಳ್ಳೆ ಏನಿದೆ ಇದೊಂದು ತರಹ ವಿಚಿತ್ರವಾದ ಸೊಳ್ಳೆ. ಸೊಳ್ಳೆ ಪರದೆ ಕೊಡಬಹುದು ಎಂದು ಇದ್ದೆವು, ಆದರೆ ಆ ತರಹ ಇದಕ್ಕೆ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ, ಇದು ಬೆಳಿಗ್ಗೆ ಹೊತ್ತು ಕಚ್ಚುವಂಥ ಸೊಳ್ಳೆ. ಮತ್ತೆ ಇದು ಯಾವುದೋ ಕಚಡಾ ನೀರಿನಲ್ಲಿ ಬ್ರೀಡ್ ಮಾಡುವುದಿಲ್ಲ. ಇದು ಒಳ್ಳೆಯ ವಾಟರ್ ಇದ್ದರೆ ಮಾತ್ರ, ನಾವು ಕುಡಿಯುವ ನೀರು, ಸ್ನಾನ ಮಾಡುವ ನೀರನ್ನು ಮುಚ್ಚಿಡದಿದ್ದರೆ ಎರಡು ಅಥವಾ ಮೂರು ದಿವಸ ತೆರೆದಿಟ್ಟರೆ ಅಲ್ಲಿ ಇದು ಬ್ರೀಡ್ ಆಗುತ್ತದೆ. ಲಾರ್ವಗಳು ಅಲ್ಲಿ ಬ್ರೀಡ್ ಆಗಿ ಆ ಸೊಳ್ಳೆಗಳು ಕಚ್ಚುವುದರಿಂದ ಇದು ಖಾಯಿಲೆ ಬರತಕ್ಕಂಥದ್ದು ಇದಕ್ಕೆ ಹೆಸರು ಇದೆ. ಈಡೀಸ್ ಈಜಿಪ್ಟಿಯಾ ಎನ್ನುವ ಸೊಳ್ಳೆ ಇದು.....

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ವಾಟಾಳ್ ನಾಗರಾಜ್‌ರವರು ಮಾರ್ನಿಂಗ್ ವಾಕ್ ಹೋಗುತ್ತಾರೆ ಅವರು ಸ್ವಲ್ಪ ಜಾಗ್ರತೆಯಿಂದ ಇರಬೇಕಾಗುತ್ತದೆ. ಈ ಸೊಳ್ಳೆ ಕಚ್ಚುವುದು ಮಾರ್ನಿಂಗ್ ಅಲ್ಲವೆ?

ಶ್ರೀ ಆರ್. ಅಶೋಕ್ : ವಾಕ್‌ಜಿಟ್ ಮಾಡುವುದು ನಿಂತು ಹೋಗುತ್ತದೆ ಅಷ್ಟೆ. ಅವರು ಒಳ್ಳೆಯ ಜಾಗ ನೋಡಿ ವಾಕ್ ಮಾಡುತ್ತಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಆದರೆ ಅದು ಬ್ರೀಡ್ ಆಗುವುದು ಒಳ್ಳೆಯ ಜಾಗದಲ್ಲಿ, ಒಳ್ಳೆಯ ನೀರಿನಲ್ಲಿ ಅಲ್ಲವೆ?

ಶ್ರೀ ವಾಟಾಳ್ ನಾಗರಾಜ್ : ಸೊಳ್ಳೆಗಳು ಕಚ್ಚುವುದು ಕಾಂಗ್ರೆಸ್‌ನವರನ್ನು ನಮ್ಮನ್ನಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವು ನಮ್ಮ ಮೈ ಮುಟ್ಟುವುದು ನೀವೇ.

ಉಪಾಧ್ಯಕ್ಷರು : ಆಯಿತು ಮುಗಿಸಿ.

ಶ್ರೀ ಆರ್. ಅಶೋಕ್ : ಆಂಧ್ರದ ರಾಜಮಂಡ್ರಿಯಿಂದ ಬೇರೆ ಬೇರೆ ಕಡೆ ರಾಯಲ್‌ಸೀಮೆ, ಹೈದರಾಬಾದ್ ಹಾಗೂ ಆಂಧ್ರದ 43 ಜಿಲ್ಲೆಗಳಲ್ಲಿ ಈ ರೋಗ ಬಂದಿದೆ. ಕರ್ನಾಟಕಕ್ಕೂ ಈ ರೋಗ ಬಂದಿದೆ. ಮಹಾರಾಷ್ಟ್ರದಲ್ಲಿ ಕೂಡ ಜಾಸ್ತಿಯಾಗಿದೆ. ಕರ್ನಾಟಕದ ಗುಲ್ಬರ್ಗಾ, ರಾಯಚೂರು, ಜಿಲ್ಲೆಗಳಿಗೆ ಎನ್‌ಐಸಿಡಿ ತಂಡ ಕೇಂದ್ರದಿಂದ ಭೇಟಿ ನೀಡಿದೆ. ಅವರು ಬಂದು ಇದರ ಬಗ್ಗೆ ಬಹಳಷ್ಟು ಮಾಹಿತಿಗಳನ್ನು ನಮಗೆ ಕೊಟ್ಟಿದ್ದಾರೆ. ನಾವು ಕೇಂದ್ರ ಸರ್ಕಾರದ ಜೊತೆಗೆ ಇದರ ಬಗ್ಗೆ ಮಾತನಾಡುತ್ತಿದ್ದೇವೆ. ಅಲ್ಲಿಂದಲೂ ಸಲಹೆ ಸೂಚನೆಗಳನ್ನು ಈಗಾಗಲೇ ತೆಗೆದುಕೊಳ್ಳುತ್ತಿದ್ದೇವೆ. ಗೌರವಾನ್ವಿತ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಇದರ ಬಗ್ಗೆ ಸರ್ಕಾರ ಎಚ್ಚರಿಕೆ ತೆಗೆದುಕೊಳ್ಳಬೇಕೆಂಬ ದೃಷ್ಟಿಯಿಂದ ಇವತ್ತು ಸಾಯಂಕಾಲ ಈ ರಾಜ್ಯದ ಗೌರವಾನ್ವಿತ ಮುಖ್ಯಮಂತ್ರಿಗಳಾದ ಮಾನ್ಯ ಕುಮಾರಸ್ವಾಮಿಯವರ ನೇತೃತ್ವದಲ್ಲಿ ನಮ್ಮ ಆರೋಗ್ಯ ಇಲಾಖೆಯ ಕಾರ್ಯದರ್ಶಿ ಮತ್ತು ಕಂದಾಯ ಹಾಗೂ ಯು.ಡಿ. ಇಲಾಖೆ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಕಾರ್ಯದರ್ಶಿಗಳ ಸಭೆ ನಡೆಯುತ್ತದೆ. ಈ ಒಂದು ಕಾಯಿಲೆ ಇರತಕ್ಕಂಥ ಹಳ್ಳಿಗಳ ಜನಕ್ಕೆ ಅನುಕೂಲ ಮಾಡಿಕೊಡಬೇಕೆಂಬ ದೃಷ್ಟಿಯಿಂದ ಮತ್ತು ಪಾರ್‌ಘಟಿಂಗ್‌ನಲ್ಲಿ ಕೆಲಸ ಮಾಡಬೇಕೆಂಬ ದೃಷ್ಟಿಯಿಂದ ನಾನು ಈಗಾಗಲೇ ಹೇಳಿರತಕ್ಕಂಥ 5 ಇಲಾಖೆಗಳ ಕಾರ್ಯದರ್ಶಿಗಳ ಒಂದು ಸಭೆಯನ್ನು ಇವತ್ತು ಸಾಯಂಕಾಲ 6 ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳಾದ ಕುಮಾರಸ್ವಾಮಿಯವರ ನೇತೃತ್ವದಲ್ಲಿ ಸಭೆಯನ್ನು ಕರೆದಿದ್ದೇನೆ. ವಾರ್‌ಘಟಿಂಗ್‌ನಲ್ಲಿ ಕೆಲಸ ಮಾಡಿ ಈ ಕಾಯಿಲೆಯನ್ನು ತಡೆಗಟ್ಟುವುದಕ್ಕೆ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆಯೋ ಆ ಎಲ್ಲ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ಬದ್ಧವಾಗಿದೆ. ಇದಕ್ಕೆ ಬೇಕಾಗಿರತಕ್ಕಂಥ ಹಣಕ್ಕೆ ಯಾವುದೇ ಕಾರಣಕ್ಕೂ ತಡೆ ಮಾಡುವುದಿಲ್ಲ. ಎಷ್ಟು ಹಣ ಬೇಕಾದರೂ ಇದಕ್ಕೆ ಬಿಡುಗಡೆ ಮಾಡಲಾಗುತ್ತದೆ. ಮತ್ತೆ ಎಷ್ಟು ಔಷಧಿ ಕೊಡುವುದಕ್ಕೂ ಸಹ ಈ ಸರ್ಕಾರ ಬದ್ಧವಾಗಿದೆ. ಇದನ್ನು ಪ್ರತಿದಿನ ಸೂಪರ್‌ವೈಜ್ ಮಾಡುವುದಕ್ಕೋಸ್ಕರ ತಂಡಗಳನ್ನು ರಚನೆ ಮಾಡಬೇಕೆಂದು ಈಗಾಗಲೇ ಮಾನ್ಯ ಸದಸ್ಯರು ತಿಳಿಸಿರುತ್ತಾರೆ. ಆದ್ದರಿಂದ ನಮ್ಮ ಕಾರ್ಯದರ್ಶಿಯವರು ಅಥವಾ ಡೈರೆಕ್ಟರ್ ಲೆವಲ್‌ನಲ್ಲಿ ರಚನೆ ಮಾಡತಕ್ಕಂಥ ತಂಡ ಅಲ್ಲಿಯೇ ಹೋಗಿ ಇದರ ಬಗ್ಗೆ ಪರಿಶೀಲನೆ ಮಾಡಿ ಈ ಒಂದು ಕಾಯಿಲೆ ಕಂಟ್ರೋಲ್

ಆಗುವವರೆಗೂ ಅಲ್ಲಿನ ವ್ಯವಸ್ಥೆ ನೋಡಿಕೊಂಡು ಇರಬೇಕೆಂಬ ನಿರ್ದೇಶನವನ್ನು ಮುಂದಿನ ಎರಡು ದಿನಗಳಲ್ಲಿ ನಾನು ಆದೇಶವನ್ನು ಮಾಡುತ್ತೇನೆ. ಮತ್ತೆ ಈ ಒಂದು ಜ್ವರ ವಿಶಿಷ್ಟವಾಗಿರುವುದರಿಂದ ಇದರ ಒಂದು ನಿಯಂತ್ರಣಕ್ಕೋಸ್ಕರ ಎನ್.ಜಿ.ಓ. ಮತ್ತು ಅಂಗನವಾಡಿ ಕಾರ್ಯಕರ್ತೆಯರನ್ನು ಇನ್ವಾಲ್ ಮಾಡಿಕೊಳ್ಳತಕ್ಕಂಥದರ ಜೊತೆಗೆ ಇದಕ್ಕೆ ಸಂಬಂಧಪಟ್ಟಂತೆ ಇನ್ನು ಏನೇನು ಕ್ರಮ ತೆಗೆದುಕೊಳ್ಳಬೇಕಾಗಿದೆಯೋ ಅವೆಲ್ಲವನ್ನು ಇವತ್ತು ಸಾಯಂಕಾಲ ನಡೆಯತಕ್ಕಂಥ ಸಭೆಯಲ್ಲಿ ನಾವು ತೆಗೆದುಕೊಳ್ಳುತ್ತೇವೆ. ತಾವೆಲ್ಲರೂ ಇದಕ್ಕೆ ಸಂಬಂಧಪಟ್ಟಂತೆ ಇಲ್ಲಿ ಏನು ಸಲಹೆಗಳನ್ನು ಕೊಟ್ಟಿದ್ದೀರಿ ಅದರ ಬಗ್ಗೆ ಕೂಡ ಗಮನ ಹರಿಸುತ್ತೇವೆ. ಇದು ಒಂದು ರೀತಿಯಲ್ಲಿ ಸಾಂಕ್ರಾಮಿಕ ರೋಗವಾಗಿ ಹರಡುತ್ತಿರುವುದರಿಂದ ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ಬದ್ಧವಾಗಿದೆ. ಮಾನ್ಯ ವಾಟಾಳ್‌ನಾಗರಾಜ್‌ರವರು ಕೋಳಿ ಜ್ವರದ ಬಗ್ಗೆ ಪ್ರಸ್ತಾಪಮಾಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಇವತ್ತು ಕೋಳಿ ಜ್ವರ ಇಲ್ಲ. ಬೇರೆ ಬೇರೆ ಮಲ್ಟಿನ್ಯಾಷನಲ್ ಕಂಪನಿಗಳು ಇದನ್ನೆಲ್ಲ ಹಬ್ಬಿಸಿ ಈ ಒಂದು ಉದ್ಯಮವನ್ನು ಹಾಳು ಮಾಡಿದ್ದಾರೆ ಎಂದು ಅವರು ಸಂಶಯವನ್ನು ವ್ಯಕ್ತಪಡಿಸಿದರು. ಈ ಕೋಳಿ ಜ್ವರ ಕರ್ನಾಟಕ ರಾಜ್ಯದಲ್ಲಿ ಎಲ್ಲಿಯೂ ಕೂಡ ಇಲ್ಲ. ಈ ಜ್ವರ ಇಲ್ಲಿಗೆ ಬಂದೇ ಇಲ್ಲ. ಆದರೆ, ಇವತ್ತಿನ ದಿವಸ ಈ ಒಂದು ಉದ್ಯಮ ಹಾಳಾಗಿದೆ. ಅಂದರೆ ಇದರ ಬಗ್ಗೆ ಮಾಧ್ಯಮಗಳು ಮತ್ತು ಪತ್ರಿಕೆಗಳ ಮುಖಾಂತರ ಬಂದಿದ್ದರಿಂದ ಈ ಒಂದು ಉದ್ಯಮ ಹಾಳಾಗಿದೆ. ಇದಕ್ಕೂ ಕೂಡ ಸರ್ಕಾರ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆಯೋ ಆ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುತ್ತದೆ. ಇದಕ್ಕೆ ಏನು ಸಹಾಯ ಮಾಡಬೇಕೆಂಬುದನ್ನು ಇನ್ನು ಎರಡು ದಿವಸಗಳಲ್ಲಿ ಹೇಳುತ್ತೇನೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಅವರಿಗೆ ಸಹಾಯ ದೃಷ್ಟಿಯಿಂದ ಏನು ಕ್ರಮ ತೆಗೆದುಕೊಳ್ಳಬೇಕೆಂದು ಕೂಡ ಪರಿಶೀಲನೆಯ ಹಂತದಲ್ಲಿದೆ. ಕೋಳಿ ತಿಂದರೆ ಈ ರೋಗ ಬರುವುದಿಲ್ಲ. ಕೋಳಿ ಮಾಂಸವನ್ನು 60 ಡಿಗ್ರಿ ಹೀಟ್‌ನಲ್ಲಿ ಬೇಯಿಸಿದರೆ ಈ ರೋಗ ಬರುವುದಿಲ್ಲ. ಮತ್ತೆ ಮೊಟ್ಟೆಯನ್ನು 30 ಡಿಗ್ರಿ ಹೀಟ್‌ನಲ್ಲಿ ಬೇಯಿಸಿದರೂ ಇದು ಬರುವುದಿಲ್ಲ. ನಮ್ಮ ಇಂಡಿಯನ್ ಸಿಸ್ಟಮ್‌ನಲ್ಲಿ 100 ಡಿಗ್ರಿಗಿಂತ ಹೆಚ್ಚು ಬೇಯಿಸುವುದರಿಂದ ಈ ರೋಗ ಬರುವುದಕ್ಕೆ ಸಾಧ್ಯವೇ ಇಲ್ಲ. ಕೋಳಿಯನ್ನು ನೇರವಾಗಿ ಮುಟ್ಟಿದರೆ ಮಾತ್ರ ಈ ರೋಗ ಬರುತ್ತದೆ. ಕೋಳಿ ತಿನ್ನುವುದರಿಂದ ಯಾವುದೇ ಕಾರಣಕ್ಕೂ ಈ ರೋಗ ಬರುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಹಾಗಾದರೆ ಮಾನ್ಯ ವಾಟಾಳ್‌ನಾಗರಾಜ್‌ರವರು ನಾಳೆಯಿಂದ ಕೋಳಿ ತಿನ್ನಬಹುದೆ?

ಶ್ರೀ ಆರ್. ಅಶೋಕ್ : ಅವರು ಓಪನ್ ಆಗಿ ತಿನ್ನುವುದಿಲ್ಲ. ಬೇರೆ ಕಡೆ ಹೋಗಿ ತಿನ್ನುತ್ತಾರೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಅವರು ದಿನ ತಿನ್ನುತ್ತಾರೆ. ಆದರೆ ನಿಮಗೆ ಗೊತ್ತಿಲ್ಲವಷ್ಟೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರು ಕೋಳಿ ತಿನ್ನಬಹುದೆ?

ಶ್ರೀ ಕೆ.ಎಸ್. ಈಶ್ವರಪ್ಪ : ಕೋಳಿ ತಿಂದರೆ ಬರುವುದಿಲ್ಲ. ಕೋಳಿ ತಿನ್ನದೆ ಹೋದರೆ ಬರುತ್ತದೆಂದು ಅವರು ಹೇಳಿದರು.

ಶ್ರೀ ವಾಟಾಳ್‌ನಾಗರಾಜ್ : ಕೋಳಿ ತಿನ್ನಬೇಕೆಂದರೆ ನಾನು ಮತ್ತು ಮಾನ್ಯ ಮಾಧುಸ್ವಾಮಿಯವರು ಒಟ್ಟಿಗೆ ಹೋಗಿ ತೆಗೆದುಕೊಳ್ಳುತ್ತೇವೆ. ಅದೇನು ತಪ್ಪಾಗುವುದಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ವಾಟಾಳ್‌ನಾಗರಾಜ್‌ರವರು ಮಾತನಾಡುವಾಗ ಮಾಂಸದ ರೇಟ್ ಜಾಸ್ತಿಯಾಯಿತು ಎಂದು ಹೇಳಿದರು. ಆದ್ದರಿಂದ ರೇಟ್ ಜಾಸ್ತಿ ಆಗಿರುವುದು ನಿಮಗೆ ಹೇಗೆ ಗೊತ್ತಾಯಿತು?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಮಾನ್ಯ ಎಸ್.ಎಸ್. ಪಾಟೀಲ್‌ರವರನ್ನು ನಿಮ್ಮಗಳ ಜೊತೆಯಲ್ಲಿ ಕರೆದುಕೊಳ್ಳಿ.

ಉಪಾಧ್ಯಕ್ಷರು : ಮಾನ್ಯ ಅಶೋಕ್‌ರವರೆ, ತಾವು ಬೇಗ ಮುಗಿಸಿ.

ಶ್ರೀ ಆರ್. ಅಶೋಕ್ : ನಮ್ಮ ರಾಜ್ಯದಲ್ಲಿರತಕ್ಕಂಥ ಚಿಕುನ್ ಗುನ್ಯಾ ರೋಗವನ್ನು ತಡೆಗಟ್ಟುವುದಕ್ಕೆ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆಯೋ ಆ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ನಾವು ಸಿದ್ದರಾಗಿದ್ದೇವೆ. ಇವತ್ತು ಸಾಯಂಕಾಲ ಮಾನ್ಯ ಮುಖ್ಯಮಂತ್ರಿಯವರ ನೇತೃತ್ವದಲ್ಲಿ ನಡೆಯುವ ಸಭೆಯಲ್ಲಿ ಇನ್ನು ಹಲವಾರು ವಿಷಯಗಳ ಬಗ್ಗೆ ಚರ್ಚೆ ಮಾಡುವುದರ ಜೊತೆಗೆ 5 ಇಲಾಖೆಯವರನ್ನು ಕೋ–ಆರ್ಡಿನೇಷನ್ ಮಾಡಿಕೊಂಡು ಇದರ ಬಗ್ಗೆ ಏನೇನು ಕ್ರಮ ತೆಗೆದುಕೊಳ್ಳಬೇಕಾಗಿದೆಯೋ ಆ ಎಲ್ಲ ಕ್ರಮಗಳನ್ನು ಖಂಡಿತ ತೆಗೆದುಕೊಳ್ಳುತ್ತೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಶೂನ್ಯ ವೇಳೆಯಲ್ಲಿ ನಾನೊಂದು ವಿಷಯ ಪ್ರಸ್ತಾಪ ಮಾಡಬೇಕಾಗಿದೆ.

ಉಪಾಧ್ಯಕ್ಷರು : ನಿಮ್ಮದು ಕೂಡ ಇದೆ. ಪಾವಗಡ ಶಾಸಕರು ಇದರ ಬಗ್ಗೆ ಏನೋ ಕೇಳುತ್ತಾರೆ.

ಶ್ರೀ ಸಿ.ಎಸ್. ಪುಟ್ಟೇಗೌಡ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶ್ರೀರಾಮರೆಡ್ಡಿಯವರು ಕೇಳಬೇಕೆಂದಿರುವ ವಿಷಯ ಬಹಳ ಮುಖ್ಯವಾಗಿದೆ. ಆದ್ದರಿಂದ ಅವರಿಗೆ ಅವಕಾಶ ಕೊಡಿ.

ಉಪಾಧ್ಯಕ್ಷರು : ಒಂದು ನಿಮಿಷ. ಪಾವಗಡದಲ್ಲಿರತಕ್ಕಂಥ ಸಮಸ್ಯೆ ಬಗ್ಗೆ ಅವರು ಹೇಳುತ್ತಾರೆ. ಆನಂತರ ತಮಗೆ ಅವಕಾಶ ಕೊಡುತ್ತೇನೆ. ಅವರು ಏನು ಹೇಳುತ್ತಾರೆಂಬುದನ್ನು ಮೊದಲು ಕೇಳೋಣ.

ಶ್ರೀ ಕೆ.ಎಂ. ತಿಮ್ಮರಾಯಪ್ಪ (ಪಾವಗಡ) : ಮಾನ್ಯ ಉಪಾಧ್ಯಕ್ಷರೆ, ಪಾವಗಡದಲ್ಲಿ ಈ ಜ್ವರ ನಿಂತುಹೋಗಿದೆ ಎಂದು ಮಾನ್ಯ ಸಚಿವರು ಈಗ ಉತ್ತರ ಕೊಟ್ಟರು. ಅವರು ಪಾವಗಡಕ್ಕೆ ಬಂದಂಥ ಸಂದರ್ಭದಲ್ಲಿ ನಾನು ಅವರಿಗೆ ಮಾಹಿತಿ ಕೊಟ್ಟಿದ್ದು, ಪಾವಗಡ ತಾಲ್ಲೂಕಿನ 95 ಹಳ್ಳಿಗಳಲ್ಲಿ ಸುಮಾರು 50 ಸಾವಿರ ಜನರಿಗೆ ಈ ಕಾಯಿಲೆ ಈಗಾಗಲೇ ಆವರಿಸಿಕೊಂಡಿದೆ. ಪ್ರತಿ ಹಳ್ಳಿಗಳಲ್ಲಿ ಸುಮಾರು 300 ರಿಂದ 500 ಪ್ರಕರಣಗಳು ಕಂಡು ಬರುತ್ತವೆ. ನನ್ನ ಹಳ್ಳಿಯಲ್ಲಿ 31ನೇ ತಾರೀಖಿನ ದಿವಸ ಸುಮಾರು 1300 ಜನರಿಗೆ ಈ ಒಂದು ಕಾಯಿಲೆ ಹಬ್ಬಿತು. ಆದರೆ, ಪಾವಗಡದಲ್ಲಿ ಈ ಕಾಯಿಲೆ ಸಂಪೂರ್ಣವಾಗಿ ನಿಂತುಹೋಗಿದೆ ಎನ್ನತಕ್ಕಂಥ ಮಾತನ್ನು ಮಾನ್ಯ ಸಚಿವರು ಈಗ ಹೇಳಿದರು. ಪಾವಗಡದಲ್ಲಿ ಕಡಿಮೆಯಾಗಿದೆ ಎನ್ನತಕ್ಕಂಥ ಮಾತನ್ನು ನಾನು ಹೇಳಿದೆ. ಏಕೆಂದರೆ ಅಲ್ಲಿ ಫಾಗಿಂಗ್ ಮಾಡಿದ್ದಾರೆ. ಅಂದರೆ ಎರಡು ತಿಂಗಳಿಂದ ಸಂಪೂರ್ಣವಾಗಿ ಫಾಗಿಂಗ್ ಮಾಡಿರುವುದರಿಂದ ಕಡಿಮೆ ಆಗುತ್ತಿದೆ ಎಂದು ನಾನು ಹೇಳಿದೆ. ಈ ಒಂದು ಹಿನ್ನಲೆಯಲ್ಲಿ ಅಲ್ಲಿ ಕಡಿಮೆ ಆಗಿದೆ ಎಂದು ಅವರು ಹೇಳಿರಬಹುದು. ಆದ್ದರಿಂದ ಒಂದು ತಪ್ಪು ಸಂದೇಶ ಈ ಸದನದ ಮುಖಾಂತರ ಹೋಗಬಾರದು. ಪಾವಗಡ ತಾಲ್ಲೂಕಿನ 95 ಹಳ್ಳಿಗಳಲ್ಲಿ ಈ ಒಂದು ಕಾಯಿಲೆ ತೀವ್ರವಾದ ರೀತಿಯಲ್ಲಿ ಹರಡಿದೆ. ಆದ್ದರಿಂದ ಇಲ್ಲಿರತಕ್ಕಂಥ ಬಡ ಜನರು ಹಾಗೂ ರೈತರಿಗೆ ಚಿಕಿತ್ಸೆ ತೆಗೆದುಕೊಳ್ಳುವುದಕ್ಕೂ ಸಹ ಕಷ್ಟವಾಗುತ್ತಿದೆ. ಇವತ್ತಿನದಿವಸ ಅಲ್ಲಿರತಕ್ಕಂಥ ವೈದ್ಯಾಧಿಕಾರಿಗಳ ಜೊತೆ ಕೆಲಸ ಮಾಡಬೇಕಾಗುತ್ತದೆ. ಆದರೆ ಅಲ್ಲಿ ತುಂಬಾ ಕಡಿಮೆ ಜನ ಅಧಿಕಾರಿಗಳು ಇದ್ದಾರೆ. ಆದ್ದರಿಂದ ಇವತ್ತಿನ ದಿವಸ ಖಾಸಗಿ ವೈದ್ಯರ ಸಹಾಯವನ್ನು ಪಡೆಯಬೇಕಾಗಿದೆ. ಮತ್ತೆ ಈ ಒಂದು ಕಾಯಿಲೆಯಲ್ಲಿ ನುರಿತ ವೈದ್ಯರ ಸಲಹೆಗಳನ್ನು ಇವತ್ತು ಪಡೆಯುವುದು ಅಲ್ಲದೆ ಸಂಘ ಸಂಸ್ಥೆಗಳ ಸಹಾಯ ಪಡೆದುಕೊಂಡು ಈ ಒಂದು ಕಾಯಿಲೆಗೆ ಚಿಕಿತ್ಸೆ ಕೊಡಿಸಬೇಕಾಗಿದೆ. ಈಗಾಗಲೇ ಎಲ್ಲ ಹಿರಿಯ ಸಚಿವರು ಹೇಳಿದ ಹಾಗೆ ಈ ಒಂದು ಕಾರ್ಯ ಸಮರೋಪಾದಿಯಲ್ಲಿ ನಡೆದು ನನ್ನ ತಾಲ್ಲೂಕಿನಲ್ಲಿರತಕ್ಕಂಥ ಈ ಒಂದು ಕಾಯಿಲೆಯನ್ನು ತೀವ್ರಗತಿಯಲ್ಲಿ ತಡೆಗಟ್ಟಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಸಚಿವರಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ಅಶೋಕ್ : ಮಾನ್ಯ ಉಪಾಧ್ಯಕ್ಷರೆ, ನಾನು ಸ್ವತಃ ಪಾವಗಡಕ್ಕೆ ಹೋಗಿ ಬಂದಿದ್ದೇನೆ. ನಾವು ಅಲ್ಲಿಗೆ ಹೋಗಿ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದು ಕೊಂಡಿರುವುದರಿಂದ ಪಟ್ಟಣ ಪ್ರದೇಶದಲ್ಲಿ ಈ ಒಂದು ಕಾಯಿಲೆ ಕಡಿಮೆಯಾಗಿದೆ. ಆದರೆ, ಹಳ್ಳಿಗಾಡಿನಲ್ಲಿ ಇದು ಹಾಗೆಯೇ ಇದೆ. ಮೇಲ್ಮನೆಯಲ್ಲಿ ಇದರ ಬಗ್ಗೆ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದರಿಂದ ನಾನೇ ತುಮಕೂರಿಗೆ ಹೋಗಿ ಮೇಲ್ಮನೆ ಸದಸ್ಯರನ್ನು ಮತ್ತು ನಮ್ಮ ಶಾಸಕರನ್ನು ಒಟ್ಟಿಗೆ ಕೂರಿಸಿಕೊಂಡು ಆ ಒಂದು ಜಿಲ್ಲೆಯಲ್ಲಿ ಬಂದಿರತಕ್ಕಂಥ ಈ ಒಂದು ರೋಗದ ನಿಯಂತ್ರಣದ ಬಗ್ಗೆ ಚರ್ಚೆ ಮಾಡಿ

ಕ್ರಮ ಕೂಡ ತೆಗೆದುಕೊಂಡಿದ್ದೇನೆ. ಮತ್ತೆ ನಾನು ಗುಲ್ಬರ್ಗಕ್ಕೆ ಹೋಗಿದ್ದಾಗಲೂ ಕೂಡ ಜಿಲ್ಲಾಧಿಕಾರಿಗಳ ಸಭೆ ಕರೆದಿದ್ದಾಗ ನಮ್ಮ ಎಲ್ಲ ಶಾಸಕರು ಆ ಒಂದು ಸಭೆಗೆ ಬಂದಿದ್ದರು. ಇದಕ್ಕೆ ಸಂಬಂಧಪಟ್ಟಂತೆ ಯಾವ ರೀತಿಯಾದ ಕ್ರಮ ತೆಗೆದುಕೊಳ್ಳಬೇಕೆಂಬುದರ ಬಗ್ಗೆ ಅವರ ಸಲಹೆಗಳನ್ನು ತೆಗೆದುಕೊಂಡು ಅದರ ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಆದೇಶ ಕೂಡ ಮಾಡಿದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್ : ಈ ಒಂದು ಕಾಯಿಲೆ ಸೊಳ್ಳೆಯಿಂದ ಬರುತ್ತದೆಂದು ಅವರು ಹೇಳಿದರು. ಆದ್ದರಿಂದ ಆ ಸೊಳ್ಳೆ ನಿಯಂತ್ರಣ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಉಪಾಧ್ಯಕ್ಷರು : ಫಾಗಿಂಗ್ ಮೆಷಿನ್ ಖರೀದಿ ಮಾಡಿದ್ದು, ಎಲ್ಲ ಜಿಲ್ಲೆಗಳಿಗೆ ಒಂದೊಂದು ಕೊಡುತ್ತೇವೆಂದು ಈಗಾಗಲೇ ಅವರು ಹೇಳಿದ್ದಾರೆ.

ಶ್ರೀ ಆರ್. ಅಶೋಕ್ : ಫಾಗಿಂಗ್ ಮಾಡುವುದರಿಂದ ಇದನ್ನು ತಡೆಯಬಹುದು. ಹಳ್ಳಿ ಜನರಿಗೆ ಇದರ ಬಗ್ಗೆ ನಾವು ಕನ್ವಿನ್ಸ್ ಮಾಡುತ್ತಿದ್ದೇವೆ. ಇವತ್ತಿನ ದಿವಸ ಫಾಗಿಂಗ್ ಕೆಲಸವನ್ನು ಹೊರಗಡೆ ಮಾತ್ರ ಮಾಡುತ್ತಿದ್ದೇವೆ. ಆದರೆ, ಇದನ್ನು ಮನೆಯೊಳಗಡೆ ಕೂಡ ಮಾಡಬೇಕೆಂದು ನಾವು ಹೇಳುತ್ತಿದ್ದೇವೆ. ಇದು ಬಹಳ ಮುಖ್ಯವಾಗಿದೆ. ಆದರೆ ಮನೆಯೊಳಗಡೆ ಮಾಡುವುದಕ್ಕೆ ಸ್ವಲ್ಪ ಗಲಾಟೆ ಮಾಡುತ್ತಿದ್ದಾರೆ. ಆದ್ದರಿಂದ ಹಳ್ಳಿ ಜನರಿಗೆ ಇದರ ಬಗ್ಗೆ ನಾವು ಕನ್ವಿನ್ಸ್ ಮಾಡುತ್ತಿದ್ದೇವೆ. ಮನೆ ಒಳಗಡೆ ಮಾಡಿದರೆ ಕೋಳಿ, ಹಸು ಸತ್ತು ಹೋಗುತ್ತವೆ ಎಂಬ ಆತಂಕ ಅವರಲ್ಲಿದೆ. ಆದ್ದರಿಂದ ಈ ರೀತಿ ಏನು ಆಗುವುದಿಲ್ಲವೆಂದು ನಮ್ಮ ಆರೋಗ್ಯಾಧಿಕಾರಿಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳು ಹೋಗಿ ಹೇಳಬೇಕೆಂದು ನಾವು ಈಗಾಗಲೇ ಹೇಳಿದ್ದೇವೆ.

(ಆ) ಮೈಸೂರು ಮುಕ್ತ ವಿಶ್ವವಿದ್ಯಾಲಯದ ತಾತ್ಕಾಲಿಕ ನೌಕರರಿಗೆ ಸಂಬಳ ಜಾಸ್ತಿ ಕೊಡಲು ಬಿಒಎಂ ತೀರ್ಮಾನ ಜಾರಿ ಮಾಡುವ ಬಗ್ಗೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಉಪಾಧ್ಯಕ್ಷರೆ, ಇದೊಂದು ಬಹಳ ಗಂಭೀರವಾದ ವಿಚಾರವಾಗಿದೆ. ಮೈಸೂರು ಮುಕ್ತ ವಿಶ್ವವಿದ್ಯಾಲಯದಲ್ಲಿ ಸುಮಾರು 360 ಜನ ತಾತ್ಕಾಲಿಕ ನೌಕರರಾಗಿ ಕೆಲಸ ಮಾಡುತ್ತಿದ್ದಾರೆ. ಅಂದರೆ, ಇವರು ಸುಮಾರು 10 ರಿಂದ 12 ವರ್ಷಗಳಿಂದ ಅಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಕೇವಲ ಎರಡೂವರೆ ಸಾವಿರ ರೂಪಾಯಿ ಮಾತ್ರ ಸಂಬಳ ಕೊಡುತ್ತಿದ್ದಾರೆ. ಐದು ತಿಂಗಳ ಹಿಂದೆ ನಾವು ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ ಸಭೆಯಲ್ಲಿ ತೀರ್ಮಾನ ಮಾಡಿ, ಅವರವರ ಕೆಲಸದ ಪ್ರಕಾರ ಅವರಿಗೆ ಕೊಡುವ ವೇಜಸ್ ಜಾಸ್ತಿ ಮಾಡಬೇಕೆಂಬ ತೀರ್ಮಾನವನ್ನು ನಾವು ಮಾಡಿದೆವು. ಮತ್ತೆ ಇದಕ್ಕೆ ಆಗತಕ್ಕಂಥ ಹಣವನ್ನು ಮೈಸೂರು ಮುಕ್ತ ವಿಶ್ವವಿದ್ಯಾಲಯದಿಂದಲೇ ಭರಿಸಬೇಕೆಂದು ಹೇಳಲಾಗಿತ್ತು. ಅಂದರೆ ಅವರಲ್ಲಿ 40 ಕೋಟಿ ರೂಪಾಯಿ ಫಿಕ್ಸ್‌ಡ್ ಡೆಪಾಸಿಟ್ ಇದೆ. ಈ ಒಂದು ಹಣದಿಂದ ಬರತಕ್ಕಂಥ ಬಡ್ಡಿ